## ನಮ್ಮ ನದಿಗಳು

ಜೀವನ್ಮುಖಿ
ಆಗಿದ್ದಾಳೆ ಅಧೋಮುಖಿ
ಹೊಟ್ಟೆಯೊಳಗೆಲ್ಲ ಸೇರಿದೆ ವಿಷ.
ವಿಷಾದ!
ಅವಳು ಜೀವನ್ಮುಖಿ

ಉರಿಯುತ್ತಿದೆ ಒಡಲು
ಕಲ್ಮಶಗಳ ಹುಡುಕಿ ಮೌನವಾಗಿದ್ದಾಳೆ
ಗಬ್ಬೆದ್ದು ನಾರುತ್ತಿದೆ
ಒಡೆದ ಹಾಲಿನಂತೆ.

ಹೆತ್ತೊಡಲಿಗೆ ಕೊಳ್ಳಿಯಿಟ್ಟು
ಎಷ್ಟು ದಿನ ಬದುಕಬಹುದು
ನೀ ಹೆತ್ತ ಮಗು ನಿನ್ನ
ಸುಟ್ಟು ಬಿಡಬಹುದು

ಜೀವನ್ಮುಖಿ, ಜ್ವಾಲಾಮುಖಿಯಾಗುವ
ಮುನ್ನ ಎಚ್ಚೆತ್ತುಕೊಳ್ಳಿರಿ
ಕಾಯ್ದುಕೊಳ್ಳಿರಿ
ಈ ನಾಡ ನದಿಗಳನ್ನ

**– ಪ್ರಿಯಾ. ಎಂ. ಭಟ್,**
**ಕುಮಟಾ**

## ದೇವಗೆ ಮನವಿ

ಸಾವೇ ಬರದ ವರವ ಕೊಟ್ರೊ
ದೇವ ನನಗೆ ಬೇಡ.
ಎಲ್ಲರ ಕೂಡಿ ಬದುಕಬೇಕು
ಉಳಿಸ್ತಿಯೇನು ನಾಡ ।
ಕಣ್ಣತೆರೆವ ಮೊದಲೇ ಮುಚ್ಚೋ
ಕೋಟಿ ಕೋಟಿ ಜೀವ
ಹೀಗ್ಯಾಕ್ ಮಾಡ್ತಿ ಹೇಳು ನಂಗೆ
ಆಟವೆ ಜನರ ಜೀವ ।
ನೇಮ ವ್ರತವ ಮಾಡೇ ಇಲ್ಲ
ಉಂಡಿದ್ದೆಲ್ಲ ನೋವೆ.
ಜೀವ ಪ್ರೀತಿ ಒಂದೇ ಸಾಕು
ಸಾಗೋದಕ್ಕೆ ನಾವೆ।
ಸಿಡುಕಲಾರೆ ಜರಿಯಲಾರೆ
ನೋಯಿಸೆ ಯಾರ ಮನವ
ಕಣ್ಣು ಮುಚ್ಚಿ ಕೂಡ್ರೋನಲ್ಲ
ಅದಕೆ ಇಂತ ನೇಮ।
ಇಕ್ಕಿದ್ದುಂಡು ನಗಿಸಿ ನಲಿವ
ಒಡವೆ ಯಾಕೆ ಬೇಕು.
ಹೀಗಿರುವಂತೆ ಎಂದೂ ಇಟ್ರೆ
ದೇವ ನನಗೆ ಸಾಕು ।

**– ಕಮಲಾ ಕೊಂಡದಕುಳಿ,**
**ಕಲ್ಲಬ್ಬೆ**


## ವಿಳಾಸ

**ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), 3ನೇ 'ಸಿ' ಅಡ್ಡರಸ್ತೆ,**
**ಕತ್ರಿಗುಪ್ಪಾ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು – 560 085.**
**ದೂರವಾಣಿ : 9986372503 Email:contact@chaitrarashmi.com,**
**Web: www.chaitrarashmi.com**



Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.


ಸೃಜನಶೀಲತೆಯ ಹುಡುಕಾಟದಲ್ಲಿ...


RNI KAR KAN/2006/19109
MAG (3)/NPP/272/2005-06


# ಚೈತ್ರರಶ್ಮಿ

ಕನ್ನಡ ಮಾಸಿಕ
ಮಾರ್ಚ್ - 2009

- A RAY OF HOPE



## ಡಿವಿಜಿ ಶಿಷ್ಯ ರಾಮಚೈತನ್ಯರ ವಿಶೇಷ ಲೇಖನ

# ದಾರಿ ಆತ್ಮೋನ್ನತಿಗೆ ಮಂಕುತಿಮ್ಮ

ಸೃಜನಶೀಲತೆಯ ಹುಡುಕಾಟದಲ್ಲಿ.....
RNI KAR KAN/2006/19109
MAG (3)/NPP/272/2005-06
CHAITRA RASHMI
Kannada Monthly
ಚೈತ್ರರಶ್ಮಿ - A RAY OF HOPE
EDITOR: RAMACHANDRA HEGDE.C.S.
ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.

| ಸಂಪುಟ: 5 | ಸಂಚಿಕೆ: 2 | ಮಾರ್ಚ್, ಏಪ್ರಿಲ್ - 2009 | ಪುಟ: 20 | ಬೆಲೆ: ರೂ. 5.00 |
|---|---|---|---|---|
| Volume: 5 | Issue: 2 | March, April - 2009 | Pages: 20 | Rs. 5.00 |

# ಆತ್ಮವಿಸ್ತಾರದ ದಾರಿಯಲ್ಲಿ ಒಂದಷ್ಟು ಹೆಜ್ಜೆಗಳು......

**ಅಂತರಂಗದಿಂದ...**

ಅದು ನನ್ನ ಸುಕೃತವೆಂದೇ ಹೇಳಬೇಕು. ಇಲ್ಲದಿದ್ದರೆ ಡಿ.ವಿ.ಜಿಯವರಂತಹ ಮಹಾನ್ ಸಾಹಿತ್ಯ ಚೇತನದ ಕುರಿತ ಸಾಕ್ಷ್ಯಚಿತ್ರ ತಯಾರಿಕೆಯ ಯೋಜನೆಯಲ್ಲಿ ಹಾಗೆ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ಲಭ್ಯವಾಗುವುದು ಅಸಾಧ್ಯದ ಮಾತೇ. ಪುಣ್ಯವಶಾತ್ ನನ್ನ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ನನಗೆ ಪರಿಚಿತವಾದ 'ಮಂಕುತಿಮ್ಮನ ಕಗ್ಗ' ಅಲ್ಲಿಂದ ಇಲ್ಲಿಯವರೆಗೂ ನನ್ನ 'ಬಾಳಿಗೊಂದು ನಂಬಿಕೆ' ಯನ್ನು ಕಟ್ಟಿಕೊಟ್ಟಿದೆ. ನನ್ನ ಜೀವನಕ್ಕೆ, ನನ್ನ ಚಿಂತನೆಗಳಿಗೆ ಹೊಸ ದೃಷ್ಟಿಯನ್ನು ನೀಡಿದ್ದು ಕಗ್ಗವೇ. ಹಾಗಾಗಿ ಡಿವಿಜಿ ನನ್ನ ದೃಷ್ಟಿಯಲ್ಲಿ ಕೇವಲ ಒಬ್ಬ ಸಾಹಿತಿ, ಕವಿ ಅಲ್ಲ. ನನ್ನ ಪಾಲಿಗೆ ಅವರೊಬ್ಬ ಗುರು ಮಾರ್ಗದರ್ಶಿ. ಡಿ.ವಿ.ಜಿಯವರೊಂದಿಗೆ ಒಡನಾಡಿದ ಹಿರಿಯರು,ಅವರೇ ಕಟ್ಟಿ ಬೆಳೆಸಿದ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ', ಡಿವಿಜಿಯವರ ಕುಟುಂಬ ವರ್ಗ, ಸ್ನೇಹಿತರು, ಅವರ ಸಾಹಿತ್ಯವನ್ನು ನಾಡಿನೆಲ್ಲೆಡೆ ಪ್ರಚಾರ ಮಾಡುತ್ತಿರುವ ಮಹನೀಯರು, ಅವರೆಲ್ಲರ ಅನುಭವಗಳು, ಸವಿನೆನಪುಗಳ ಮೂಲಕ ಡಿವಿಜಿಯವರನ್ನು ನಮ್ಮ ಕಾಲದ ವಯೋಮಾನದ ನಾಡಿನ ಯುವಮಿತ್ರರಿಗೆ ಪರಿಚಯಿಸುವುದು 'ಸಮಾಜ ಸೇವಕರ ಸಮಿತಿ'ಯ ಗೆಳೆಯರ ಉದ್ದೇಶ. ಈ ಹಿನ್ನೆಲೆಯಲ್ಲಿ ಡಿವಿಜಿಯವರನ್ನು ಕುರಿತ ಸಾಕ್ಷ್ಯಚಿತ್ರವನ್ನು ಚಿತ್ರೀಕರಿಸಿ ಅದನ್ನು ಕಳೆದ ಮಾರ್ಚ್ 17 ರಂದು ಸಮಾಜ ಸೇವಕರ ಸಮಿತಿಯಿಂದ ಬೆಂಗಳೂರಿನಲ್ಲಿ ನಡೆದ ಡಿವಿಜಿ ಜನ್ಮದಿನ ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು.

ಈ ನಮ್ಮ ಸಾಕ್ಷ್ಯಚಿತ್ರದ ಚಿತ್ರೀಕರಣ ತಂಡದಲ್ಲಿ ನಾನೂ ಒಬ್ಬನಾಗಿದ್ದು ನನ್ನ ಬದುಕಿನ ಸ್ಮರಣೀಯ ಸಂಗತಿಗಳಲ್ಲೊಂದು. ಡಿವಿಜಿಯವರನ್ನು ಹತ್ತಿರದಿಂದ ಕಂಡ ಅವರೊಂದಿಗೆ ಅನೇಕ ವರ್ಷಗಳ ಕಾಲ ಒಡನಾಡಿದ ನಾಡಿನ ಸಾಹಿತ್ಯರತ್ನಗಳಾದ ಪ್ರೊ|| ಎಲ್.ಎಸ್. ಶೇಷಗಿರಿರಾವ್, ಪ್ರೊ|| ಜಿ.ವೆಂಕಟಸುಬ್ಬಯ್ಯ, ನಾಡು ಕಂಡ ಶ್ರೇಷ್ಠ ವಿದ್ವಾಂಸ ಮಹಾಮಹೋಪಾಧ್ಯಾಯ ವಿದ್ವಾನ್ ಶ್ರೀ ಎನ್.ರಂಗನಾಥ ಶರ್ಮ, ಅಂತರಾಷ್ಟ್ರೀಯ ಖ್ಯಾತಿಯ ಭೂವಿಜ್ಞಾನಿ ಪದ್ಮಶ್ರೀ ಡಾ|| ಬಿ.ಪಿ.ರಾಧಾಕೃಷ್ಣ, ಅಂತರಾಷ್ಟ್ರೀಯ ಖ್ಯಾತಿಯ ಚಲನಚಿತ್ರ ನಿರ್ದೇಶಕ ಎಂ.ವಿ.ಕೃಷ್ಣಸ್ವಾಮಿ ಅಯ್ಯಂಗಾರ್, ಡಿವಿಜಿಯವರ ಆಪ್ತ ಶಿಷ್ಯರಾದ ಶ್ರೀ ಎಸ್.ಆರ್.ರಾಮಸ್ವಾಮಿ, ಶ್ರೀ ರಾಮಚೈತನ್ಯ, ಶ್ರೀಮತಿ ಸರಸ್ವತಿ ವೆಂಕಟರಮಣನ್ ಮುಂತಾದ ಹಿರಿಯರ ಡಿವಿಜಿಯವರೊಂದಿಗಿನ ಒಡನಾಟದ ಅನುಭವಗಳು, ಸವಿನೆನಪುಗಳನ್ನು ಕೇಳುವ ಭಾಗ್ಯ ನಮ್ಮದಾಯಿತು. ಅಷ್ಟೇ ಅಲ್ಲದೇ ಡಿವಿಜಿಯವರ ಅಪರೂಪದ ಛಾಯಾಚಿತ್ರಗಳು, ಪತ್ರಗಳು, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಅವರು ನಡೆದಾಡಿದ ಪರಿಸರ ಎಲ್ಲವನ್ನು ನೋಡುವ, ಅದರಿಂದ ನಮ್ಮ ಬದುಕಿಗೊಂದಷ್ಟು ಹೊಸತನ ತಂದುಕೊಳ್ಳುವ ಅಪೂರ್ವ ಅವಕಾಶ ಲಭ್ಯವಾಯಿತು. ಅದು ಕಟ್ಟಿಕೊಟ್ಟ ಅನನ್ಯ ಸ್ಮರಣೀಯ ಅನುಭವಗಳ ಕುರಿತು ಮತ್ತೊಮ್ಮೆ ಬರೆಯುತ್ತೇನೆ.

ಬದುಕಿಗೆ ಮೆರುಗು ತಂದ ಆ ಅವಿಸ್ಮರಣೀಯ ಕ್ಷಣಗಳಿಗೆ, ಅದಕ್ಕೆ ಕಾರಣರಾದ ಸಮಿತಿಯ ಮಿತ್ರರಿಗೆ ಮನತುಂಬಿ ವಂದಿಸುತ್ತಾ...........

**– ನಿಮ್ಮವನು ರಾಚಂ**





ನಮ್ಮ ನಾಡಿನ ಇತಿಹಾಸ, ನಮ್ಮ ನೆಲವನ್ನು ಪವಿತ್ರಗೊಳಿಸಿದ ಎಷ್ಟೋ ಮಹನೀಯರು ನಮಗೆ ಗೊತ್ತಿಲ್ಲ. ಇಂತಹ ಮಹಾನ್ ಲೇಖಕರ ಕೃತಿಯಿಂದ ಓದಿ ತಿಳಿಯಲೇ ಬೇಕು.

ಅವರ ದೊಡ್ಡಪ್ಪ, ಮಹಾನ್ ಸಾಹಿತ್ಯ ಶಕ್ತಿಯೆಂದೇ ಹೆಸರು ಪಡೆದ ಕನ್ನಡದ ಪ್ರಾತಃ ಸ್ಮರಣೀಯ ವ್ಯಕ್ತಿ ಟಿ.ಎಸ್. ವೆಂಕಣ್ಣಯ್ಯನವರ ಮಾರ್ಗದರ್ಶನ, ಅವರ ಸಾಹಿತ್ಯ ರಚನೆಗೆ ಶಕ್ತಿ ನೀಡಿ ಅನುಗ್ರಹಿಸಿದವರೆಂದು ಒಂದು ಕಡೆ ಹೇಳುತ್ತಾರೆ. 'ದುರ್ಗಾಸಮಾನ' ಕೃತಿಯನ್ನು ಈ ತೆರನಾಗಿ ಅವರಿಗೇ ಅರ್ಪಣೆ ಮಾಡಿದ್ದಾರೆ. ಸಾಹಿತ್ಯ ಪ್ರೀತಿ, ಬರವಣಿಗೆ ಅವರ ಹಿರಿಯರಿಂದಲೇ ಬಂದ ಕೊಡುಗೆ ಎಂಬುದಿಲ್ಲಿ ತಿಳಿಯುತ್ತದೆ.

ಬಹುಷಃ ಚಿತ್ರದುರ್ಗದ ಪಾಳೆಯಗಾರರನ್ನ ಕುರಿತು ಒಟ್ಟು ಹತ್ತು ಕಾದಂಬರಿಗಳನ್ನು ಅವರು ಬರೆದಿದ್ದಾರೆ. ದುರ್ಗಾಸ್ತಮಾನದಲ್ಲಿ ಮಾತ್ರ ಚರಿತ್ರೆ ಕಥೆಯಾಗಿ, ಕಾದಂಬರಿಯಾಗಿ ಬಂದು, ಸಂಭಾಷಣೆ, ಭಾಷಾ ಶೈಲಿಗಳಲ್ಲಿ ಚತುರತೆ ಮಾತ್ರ ಐತಿಹಾಸಿಕ ಕಾದಂಬರಿಯಲ್ಲೇ ಅಪರೂಪವಾಗಿ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ.

ಸ್ವಾರ್ಥ, ಸಂಘರ್ಷ, ದುರಂತ, ಪತನ, ಕಪಟ ಇವೆಲ್ಲವುಗಳಿಂದ ಬದುಕಿನ ಮೌಲ್ಯಗಳು ಕಳೆದು ಹೋಗುತ್ತದೆ. ದುರ್ಗಾಸಮಾನ ಹೇಳಿದ್ದೂ ಅದನ್ನೇ. ಏನೇ ಆಗಲಿ, ಅವರ ಅನಾರೋಗ್ಯ ಕಾಲದಲ್ಲೂ ಬಿಡದೆ ಈ ಕಾದಂಬರಿ ಬರೆದು ಮುಗಿಸಿದ್ದು ಮಾತ್ರ ಅವರ ಆತ್ಮವಿಶ್ವಾಸದ ದ್ಯೋತಕವೆಂದು ಹೇಳಬಹುದು. ಆದರೆ ಈ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಗುವ ಮೊದಲೇ ಇನ್ನಿಲ್ಲವಾದದ್ದು ಬೇಸರದ ಸಂಗತಿ. ಎಸ್.ಎಸ್. ಭೈರಪ್ಪನವರು ಹೇಳಿದಂತೆ "ರಾಜಕಾರಣದ ತಂತ್ರ, ಭಾಷೆ, ಕೋಟೆಗಳ ಲಗ್ಗೆಗಳ ವಿವರ, ಜನಜೀವನ ಹೀಗೆ ಆ ಜೀವನದ ನೂರೊಂದು ಮುಖಗಳು ಕಾದಂಬರಿಯ ವ್ಯಕ್ತಿತ್ವದಲ್ಲಿ ಜೀವ ತಳೆದು ನಿಲ್ಲುತ್ತವೆ. ದುರ್ಗಾಸ್ತಮಾನವು ತ.ರಾ.ಸು ರವರ ಅತ್ಯುತ್ತಮ ಕೃತಿ ಮಾತ್ರವಲ್ಲ. ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಿದೆ" ಎಂದು.

ತ.ರಾ.ಸು ನಮ್ಮನ್ನಗಲಿದ್ದಾರೆ. ಅವರ ಪುಸ್ತಕಗಳು ಮುಂದಿನ ತಲೆಮಾರುಗಳಿಗೆ ಅವರು ನೀಡಿದ ಉಡುಗೊರೆ. ಅವರದೇ ಮಾತೊಂದು ನೆನಪಾಗುತ್ತದೆ ಪ್ರಶಸ್ತಿಯ ಕುರಿತಾಗಿ. "ಓದಿದವರು 'ಚೆನ್ನಾಗಿದೆ' ಎಂದರೆ ಅದಕ್ಕಿಂತ ದೊಡ್ಡ ಪ್ರಶಸ್ತಿ ಯಾವುದೂ ಇಲ್ಲ. ಆದರೆ ಪ್ರಶಸ್ತಿಯೆಂಬುದು ಬಂದರೆ ಒಂದೇ ಲಾಭ. ಹತ್ತು ಸಾವಿರ ರೂಪಾಯಿ ಬರುತ್ತದೆ. ಕೆಲವು ಚಿಲ್ಲರೆ ಸಾಲ ತೀರಿಸಿ ಕೊಳ್ಳಬಹುದು" ಅಂತ. ಇದರಿಂದಲೇ ನಾವವರ ಬದುಕಿನ ಚಿತ್ರಣ ಹೇಗಿತ್ತು ಎಂಬುದನ್ನು ಊಹಿಸಬಹುದು. ಕನ್ನಡ ಕಾದಂಬರಿ ಲೋಕದ ಆ ಮಹಾನ್ ದಿಗ್ಗಜನಿಗೆ ನಮ್ಮ ನಮನ.

**ಡೊಂ ಕೋ ಕ್ತಿ**

- ಕೆಲವು 'ಕೋರ್ಟ್ ಕೇಸ್' ಗಳೂ ಕೂಡ ಅನುವಂಶಿಕವಾಗಿ ಬರುವ ರೋಗಗಳ ಸಾಲಿಗೆ ಸೇರುತ್ತವೆ.
- ಜಗತ್ತಿನಲ್ಲಿ ಪರಿಪೂರ್ಣರೆಂದು 'ಅನಿಸಿಕೊಂಡವರಿಗಿಂತಲೂ' ಹಾಗೆ 'ಅಂದುಕೊಂಡವರೇ' ಹೆಚ್ಚು.
- ಕೆಲವರಿಗೆ ಸಿಗರೇಟ್ ಕಂಡರೆ ತುಂಬಾ ಕೋಪ. ಹಾಗಾಗಿಯೇ ಬಾಯಲ್ಲಿಟ್ಟುಕೊಂಡು ಸುಟ್ಟು ಬಿಡುತ್ತಾರೆ.
- ರಾಜಕಾರಣಿಯಾಗೋದು ಕಷ್ಟವಲ್ಲ. ಒಬ್ಬ ಉತ್ತಮ ಪ್ರಜೆಯಾಗೋದು ನಿಜಕ್ಕೂ ಕಷ್ಟ.

– ವಿ.ಸುಂಕಸಾಳ 9844673588

♦ ಮುಖಪುಟ ವಿನ್ಯಾಸ : ಸುನಿಲ್ ಕುಲಕರ್ಣಿ, ಮಂಗಳೂರು ♦ ರೇಖಾಚಿತ್ರಗಳು : ಪ್ರಮೋದ್ ಪಿ.ಟಿ.

# ಸಾಹಿತ್ಯ ಜೀವನದ ಕನಸು ಹೊತ್ತಿಗೆಗಳಲ್ಲಿ ತುಂಬಿದರು

# ತ.ರಾ.ಸು



ಸುಧಾ. ಎಂ.
ಕರ್ಕಿಸವಲು

ಐತಿಹಾಸಿಕ ಕಾದಂಬರಿಕಾರರೆಂದೇ ಹೆಸರು ಪಡೆದ ತ.ರಾ.ಸು ರವರು ಈ ದಿನ ನಮ್ಮ ಮುಂದಿಲ್ಲ. ಆದರೆ ಅವರು ನಮಗಿತ್ತ ಅಪರೂಪದ ಇತಿಹಾಸದ ಕಾದಂಬರಿಗಳು ನಿಜಕ್ಕೂ ಸತ್ವದ ಹೊರತಾಗಿಲ್ಲ. ಅವರಿಂದ ರಚಿಸಲ್ಪಟ್ಟ ಕೆಲವು ಸಾಮಾಜಿಕ ಕಾದಂಬರಿಗಳೂ ಕೂಡ ವಿಶೇಷತೆಯಿಂದ ಕೂಡಿವೆ. ನನಗೆ ಅತಿಯಾಗಿ ಆಳವಾಗಿ ಮನದಲ್ಲಿ ನೆಲೆ ನಿಂತ ಪುಸ್ತಕವೊಂದಿದೆ. ಚಿತ್ರದುರ್ಗದ ಪಾಳೆಯಗಾರರಲ್ಲಿ ಒಬ್ಬರಾದ ಮದಕರಿನಾಯಕನ ಅಪ್ರತಿಮ ಶೌರ್ಯ, ಸಾಹಸಗಳಿಂದ ಜನತೆಯ ಅಭಿಮಾನದ ತಳಹದಿಯ ಮೇಲೆ ಕೋಟೆ ನಿರ್ಮಿಸಿ, ರಕ್ಷಣಾ ಬಲದಿಂದ ಎಂದೂ ಸೋತು ಶರಣಾಗದೆ, ಹೈದರಾಲಿಗೆ ಸವಾಲಾಗಿ ನಿಂತು, ಸೆಣೆಸಿದ ಏಕೈಕ ವೀರಗಂಡಿನ ಬಗ್ಗೆ, ದುರ್ಗದ ಕೋಟೆ ಕೊತ್ತಲಗಳ ವೀರಗಾಥೆಯನ್ನೊಳಗೊಂಡ ಪುಸ್ತಕವೇ 'ದುರ್ಗಾಸ್ತಮಾನ'.

ಶತಮಾನಗಳ ಹಿಂದೆ ನಡೆದ ಇತಿಹಾಸವನ್ನು ಕೆದಕಿ ಅದರ ಮೂಲ ಸ್ತರವನ್ನು ಬಿಚ್ಚುತ್ತಾ, ಸತ್ಯವನ್ನು ಬಗೆದು ಹೊರತೆಗೆದು ಅಂದಿನ ಕಾಲದ ಭಾಷೆಯನ್ನು ಕಲಾ ಕೌಶಲದಿಂದ ರಸವತ್ತಾಗಿ ನಿರೂಪಿಸಿ, ಕಣ್ಣಿಗೆ ಕಟ್ಟುವಂತೆ ಬರೆದದ್ದು ಮಾತ್ರ ಎಂತಹವರನ್ನೂ ಬೆರಗುಗೊಳಿಸುತ್ತದೆ. ದುರ್ಗಾಸ್ತಮಾನ ಕಾದಂಬರಿಯಲ್ಲಿ ದುರ್ಗದ ಕೊನೆಯ (ಪಾಳೆಗಾರ) ದೊರೆ ಮದಕರಿಯ ಆಳ್ವಿಕೆಯ ಏಳು – ಬೀಳುಗಳು, ಜೀವನದ ಸೆಳೆತ – ಮಿಳಿತಗಳು. ಸಾಫಲ್ಯ, ಅವನವ್ವೆ ಓಬವ್ವ ನಾಗತಿ, ಕಳ್ಳಿ ನರಸಪ್ಪಯ್ಯ (ಪ್ರಧಾನಿ), ಒನಕೆ ಓಬವ್ವ, ಕಾಶಣ್ಣನಾಯಕ, ಆತನ ಆರಾಧ್ಯ ದೇವಿ ಉತ್ಸವಾಂಬೆ. ಹೀಗೆ ನೆನಪಿಸಿಕೊಂಡು ಬರೆಯುತ್ತ ಹೋದರೆ, ಅಲ್ಲಿ ಬರುವ ವ್ಯಕ್ತಿ ಚಿತ್ರಗಳು ಒಂದೊಂದಾಗಿ ಪುಟ ತಿರುವುತ್ತವೆ. ಅಷ್ಟೇ ಅಲ್ಲ. ಆಗಿನಕಾಲದ ಬದುಕು – ಭವಣೆ, ಭಾವನೆ, ನಂಬಿಕೆ ಎಲ್ಲವನ್ನೂ ಅನುಭವಗಳ ಮೂಸೆಯಲ್ಲಿ ಹೊಕ್ಕು ಹೊರತಂದಿದ್ದಾರೆ. ಅವರದೇ ಕೃತಿ 'ಹಂಸಗೀತೆ' ಯೂ ನನ್ನ ಸೆರೆ ಹಿಡಿದ ಕಾದಂಬರಿ. 'ದುರ್ಗಾಸ್ತಮಾನ' ದಲ್ಲಿ ಮದಕರಿ ಹೋರಾಡುತ್ತ ನೆಲಕ್ಕುರುಳಿ ಬಿದ್ದಾಗ ಭಾವುಕಳಾಗಿ ಅತ್ತಿದ್ದೇನೆ. ಹಂಸಗೀತೆಯಲ್ಲೂ ಅಷ್ಟೆ. ಭೈರವಿ ವೆಂಕಟ ಸುಬ್ಬಯ್ಯನವರು ಹೈದರಾಲಿ ಏಕನಾಥೇಶ್ವರಿ ಅಮ್ಮನವರ ಗುಡಿಯಲ್ಲಿ ಹಾಡಬೇಕೆಂದು ಆಜ್ಞೆ ಕೊಟ್ಟಾಗ ಅದೇ ಅಮ್ಮನ ಕಣ್ಣೆದುರೇ ತನ್ನ ನಾಲಿಗೆಯನ್ನೇ ಕತ್ತರಿಸಿಕೊಂಡಾಗಿನ ಸನ್ನಿವೇಶ ಓದಿದಾಗ ತರತರನೇ ಕಂಪಿಸಿದ್ದೇನೆ. ಅಬ್ಬಬ್ಬಾ !

**ಸ್ವಾರ್ಥ, ಸಂಘರ್ಷ, ದುರಂತ, ಪತನ, ಕಪಟ ಇವೆಲ್ಲವುಗಳಿಂದ ಬದುಕಿನ ಮೌಲ್ಯಗಳು ಕಳೆದು ಹೋಗುತ್ತದೆ. ದುರ್ಗಾಸಮಾನ ಹೇಳಿದ್ದೂ ಅದನ್ನೇ. ಏನೇ ಆಗಲಿ, ಅವರ ಅನಾರೋಗ್ಯ ಕಾಲದಲ್ಲೂ ಬಿಡದೆ ಈ ಕಾದಂಬರಿ ಬರೆದು ಮುಗಿಸಿದ್ದು ಮಾತ್ರ ಅವರ ಆತ್ಮವಿಶ್ವಾಸದ ದ್ಯೋತಕವೆಂದು ಹೇಳಬಹುದು. ಆದರೆ ಈ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಗುವ ಮೊದಲೇ ಇನ್ನಿಲ್ಲವಾದದ್ದು ಬೇಸರದ ಸಂಗತಿ.**





• ವಿಶೇಷ ಲೇಖನ •

# ಮೇರೆಯರಿಯದ ಸಾಧಕ, ಬ್ರಹ್ಮಪುತ್ತನ ಭಿಕ್ಷುಕ

## ಡಿ.ವಿ.ಜಿ



**ಶ್ರೀ ರಾಮಚೈತನ್ಯ :**

ಡಿವಿಜಿಯವರು "ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ"ಯಲ್ಲಿ ನಡೆಸುತ್ತಿದ್ದ ವ್ಯಾಸಂಗ ಗೋಷ್ಠಿಗಳಲ್ಲಿ ಅವರ ಶಿಷ್ಯರಾಗಿದ್ದವರು. ಶ್ರೀ ಡಿ.ಆರ್.ವೆಂಕಟರಮಣನ್, ಶ್ರೀ ಎಸ್.ಆರ್ ರಾಮಸ್ವಾಮಿ ಅವರ ಜತೆ ಸುಮಾರು ಹದಿನೆಂಟು ವರ್ಷಗಳ ಕಾಲ ಡಿವಿಜಿಯವರ ಆಪ್ತ ಶಿಷ್ಯವರ್ಗದಲ್ಲಿ ಒಬ್ಬರಾಗಿದ್ದವರು. 78ರ ಇಳಿ ವಯಸ್ಸಿನಲ್ಲೂ ರಾಮಚೈತನ್ಯರದು ಹೆಸರಿಗೆ ತಕ್ಕಂತೆ ದಣಿವರಿಯದ 'ಚೈತನ್ಯ'. ನಾವು ಅವರ ಭೇಟಿಗೆಂದು ಅವರು ವಾಸವಾಗಿರುವ ಬೆಂಗಳೂರಿನ ಮತ್ತೀಕೆರೆಗೆ ಹೋಗಿದ್ದಾಗ ನಮ್ಮನ್ನು ಮನೆಗೆ ಕರೆದೊಯ್ಯಲು ಸ್ವತಃ ಅವರೇ ಬಸ್‌ನಿಲ್ದಾಣಕ್ಕೆ ಬಂದಿದ್ದರೆಂದರೆ ಅವರ ಜೀವನೋತ್ಸಾಹ ಅರ್ಥವಾದೀತು. ಅಂದು ಅವರು ಡಿವಿಜಿಯವರ ಕುರಿತಾದ ಅನೇಕ ಅಪರೂಪದ ವಿಷಯಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಡಿವಿಜಿಯವರೊಂದಿಗಿನ ಹಲವಾರು ವರ್ಷಗಳ ತಮ್ಮ ಒಡನಾಟದಲ್ಲಿ ತಾವು ನೋಡಿದ, ಅನುಭವಿಸಿದ ಹಲವು ವಿಷಯಗಳ ಮೂಲಕ ಆ ಮೇರು ಧೀಮಂತನ ವ್ಯಕ್ತಿತ್ವವನ್ನು ಅವರು ಇಲ್ಲಿ ಪರಿಚಯಿಸಿದ್ದಾರೆ. ಇದು ಅವರು ಚೈತ್ರರಶ್ಮಿಗಾಗಿಯೆ ಬರೆದ ವಿಶೇಷ ಲೇಖನ.

ಉಪನಿಷತ್‌ಗಳ ಸಾರಸರ್ವಸ್ವವಾಗಿರುವ "ಮಂಕುತಿಮ್ಮನ ಕಗ್ಗ" ಬರೆದ ಡಿ.ವಿ.ಜಿಯವರ ಹೆಸರು ಕನ್ನಡಿಗರಿಗೆ ಚಿರಪರಿಚಿತ.ಕಗ್ಗದ 'ಬದುಕು ಜಟಕಾ ಬಂಡಿ' ಇತ್ಯಾದಿ ಸಾಲುಗಳು ಇಂದು ಮನೆಮಾತಾಗಿದೆ. ಡಿ.ವಿ.ಜಿಯವರ ಸತ್ಸಂಗ ಮತ್ತು ಪರಿಚರ್ಯೆ ಮಾಡುವ ಯೋಗ ದೊರಕಿದವರಲ್ಲಿ ನಾನೊಬ್ಬ ಪಳೆಯುಳಿಕೆ. ಅವರ ಬರಹಗಳನ್ನು ಓದಿದವರು ಅನೇಕ. ಅದರೆ ಅವರ ಸಾಮೀಪ್ಯ ಮತ್ತು ಅವರ ಮಾತುಗಳನ್ನು ಕೇಳುವ ಭಾಗ್ಯ ಕೆಲವರಿಗೇ. ವಿ.ಸೀ ಯವರು ಹೇಳಿದಂತೆ ಡಿ.ವಿ.ಜಿಯವರದ್ದು 'massive Intellect' ; ಅಷ್ಟೇ ಅಲ್ಲ ಅವರ ದೇಹ ಕೂಡ massive.

"ಆಡು ಮುಟ್ಟದ ಸೊಪ್ಪಿಲ್ಲ" ವೆಂಬ ಗಾದೆ ಮಾತುಂಟು. ಅಂತೆಯೇ ಡಿ.ವಿ.ಜಿಯವರು ಕೆಲಸ ಮಾಡದ ಕ್ಷೇತ್ರವಿಲ್ಲವೆನ್ನಬಹುದು. ಜೀವನಕ್ಕೆ ಆರಿಸಿಕೊಂಡ ಉದ್ಯೋಗ ಪತ್ರಿಕೋದ್ಯಮ. ಅವರು ಏನೇ ಕೆಲಸ ಮಾಡಲಿ ಏನೇ ಬರೆಯಲಿ ಅದು 'ಪಾಂಕ್ತ'ವಾಗಿರಬೇಕು. ಒಳ್ಳೆಯ ಪತ್ರಿಕೋದ್ಯಮಿಯಾಗಲು ಸತತ ವ್ಯಾಸಂಗ. ಈ ಪರಿಶ್ರಮದಿಂದ ಸಾಹಿತ್ಯ ಕ್ಷೇತ್ರದಲ್ಲಿ, ರಾಜ್ಯಶಾಸ್ತ್ರ, ಚರಿತ್ರೆ, ಅರ್ಥಶಾಸ್ತ್ರದಲ್ಲಿ ಉದ್ದಾಮ ಪಂಡಿತರಾದರು. ಅವರಮನೆಯ ವಾತಾವರಣದಿಂದ ಸಂಗೀತದಲ್ಲಿ ಬಹುಶ್ರುತರಾದರು. ವಿಜ್ಞಾನದಲ್ಲೂ ಸಾಕಷ್ಟು ಜ್ಞಾನ ಸಂಪಾದಿಸಿದ್ದರು.ಎಳೆಯ ವಯಸಿನಲ್ಲೇ ನಮಗೆ ಕಾಣದ ಹಿರಿಯ ಶಕ್ತಿ ಇದೆ–ಅದು ಸರ್ವತೋವ್ಯಾಪಿ ಎಂಬ ನಿರ್ಧಾರಕ್ಕೆ ಬಂದಿದ್ದರು. ಅವರು 1924 ರಲ್ಲಿ ಬರೆದ ಈ ಸಾಲುಗಳನ್ನು ಗಮನಿಸಬಹುದು.

**ಅವನ ಕೃತಿಯ ನೋಡಿಮಣಿವೆ**
**ವವನ ದನಿಯ ಕೇಳಿ ನಲಿವೆ**
**ವವನ ಭಿಕ್ಷೆಯುಂಡು ಬೆಳೆವೆವವನನರಿಯೆವು ।**
**ಅವನ ಲೀಲೆಗಳನು ಕಾಣ್ಬೆವವನ ಕಾಣೆವು ॥**

ಅವರು 1923 ರಲ್ಲಿ ಬರೆದ ಒಂದು ಕಾಗದದಲ್ಲಿ "I have always viewed life as supreme 'leela'-sport if you like" ಎಂದಿದ್ದಾರೆ. ಜಗತ್ತು ಬ್ರಹ್ಮವಸ್ತುವಿನ ಆವಾಸಸ್ಥಾನ.ಆದ್ದರಿಂದ ಜಗತ್ತನ್ನು ಗೌರವಿಸಬೇಕು ಎಂಬ ಸಿದ್ಧಾಂತ ಅವರ ವಿಸ್ತಾರವಾದ ಕಾರ್ಯಕ್ಷೇತ್ರಕ್ಕೆ ಅಡಿಗಲ್ಲು. ಪ್ರಥಮ ಮಹಾಯುದ್ಧದ ನಂತರ ಬಂದ ಇನ್‌ಫ್ಲುಯೆಂಜ಼ಾ ರೋಗ(Influenza Epidemic) ಅನೇಕರನ್ನು ಬಲಿತೆಗೆದುಕೊಂಢಿತು.ಆ ಸಮಯದಲ್ಲಿ ಡಿ.ವಿ.ಜಿ.ಸ್ನೇಹಿತರೊಡಗೂಡಿ ರೋಗ ಸಂತ್ರಸ್ತರಿಗೆ ಪಥ್ಯೋಪಚಾರ ನಡೆಸಿದರು.



ಅವರು "ಸ್ಮಿತ ಪೂರ್ವಭಾಷಿ"–ನಗುಮೊಗದಿಂದ ಎಲ್ಲರನ್ನೂ ಮಾತನಾಡಿಸುತ್ತಿದ್ದರು. ಅವರ ಮನೆಗೆ ಎಲ್ಲ ರೀತಿಯ ಜನ ಬರುತ್ತಿದ್ದರು.ಇಂಗೀಷ್ ಪ್ರಾಧ್ಯಾಪಕರಾಗಿದ್ದ ಕೆ. ಅನಂತರಾಮಯ್ಯ ನವರು ಡಿ.ವಿ.ಜಿಯವರ ಮನೆ ಒಂದು 'variety fair –you can meet all kinds of people ,from fools to philosophers' ಎಂದು ಹೇಳಿದರು. ಮನೆಗೆ ಯಾರೇ ಬರಲಿ ಒಳ್ಳೆಯ ಮಾತಿನಿಂದ ಆದರಿಸುತ್ತಿದ್ದರು. ಸಹಾಯ ಕೇಳಿದವರಿಗೆ– ಕೇಳಿದವರ ಉದ್ದೇಶ ಪ್ರಾಮಾಣಿಕವೆನಿಸಿದರೆ–ತಮ್ಮ ಕೈಲಾದ ಸಹಾಯ ಮಾಡುತ್ತಿದ್ದುದೇ ಅಲ್ಲದೇ, ಇತರರಿಂದಲೂ ಮಾಡಿಸುತ್ತಿದ್ದರು. ನೆಟ್ಟಕಲ್ಲಪ್ಪ ಸರ್ಕಲ್ ಬಳಿಯ ಜಟಕಾ ಬಂಡಿಯುವರಿಗೆ ಅವರು 'ಯುಜಮಾನ್'. ಜಟಕಾ ಬಂಡಿಯವರ ಅನೇಕ ಸಮಸ್ಯೆಗಳನ್ನು ಅವರು ಬಗೆಹರಿಸುತ್ತಿದ್ದರು. ಜಟಕಾ ಸಾಹೇಬರೊಬ್ಬರಿಗೆ ಅನಾರೋಗ್ಯ ನಿಮಿತ್ತ ದುಡಿಯಲು ಆಗದಿದ್ದಾಗ ತಮ್ಮ ಕೈಲಾದ ಸಹಾಯಮಾಡಿ,ನಮಗೆ (ವೆಂಕಟರಮಣನ್ ಮತ್ತು ನಾನು) ಒಂದು ಚೀಟಿ ಕಳುಹಿಸಿ 'ಇವನು ಪ್ರಾಮಾಣಿಕ– ಅವನಿಗೇ ದುಡಿಯಲು ಆಗದಿದ್ದಾಗ ಅವನ ಕುದುರೆಯ ಗತಿಯೇನು? ನೀವು ನಿಮ್ಮ ಕೈಲಾದ ಸಹಾಯ ಮಾಡಿ' ಎಂದು ತಿಳಿಸಿದರು. ಒಬ್ಬ ಬಡ ವಿದ್ಯಾರ್ಥಿಗೆ ವಾರಾನ್ನ ಕಲ್ಪಿಸಿ ವಿದ್ಯಾವಂತನಾಗಲು ಸಹಾಯ ಮಾಡಿದರು.

ಅವರು ಸುಲಭರು.(easy acccessible). 'ಸಂತೋಷಂ ಜನ್ಯೇತ್ ಪ್ರಾಜ್ಞಃ' ಎಂಬ ಮಾತು ಅವರ ವಿಷಯದಲ್ಲಿ ಅಕ್ಷರಶಃ ಸತ್ಯ. ಮಿತ್ರ ವೆಂಕಟರಮಣನ್ ಮತ್ತು ನಾನು ವಾಲ್ಟ್ ಡಿಸ್ನಿಯ "perry" ಎಂಬ ಸಿನೆಮಾ ನೋಡಲು ಕರೆದಾಗ ನಮ್ಮ ಸಂತೋಷಕ್ಕಾಗಿ ಬಂದರು.ಇದೇ ರೀತಿ ಅನೇಕ ಸಂಜೆಗಳನ್ನು ಎಮ್.ಎನ್.ಕೃಷ್ಣರಾವ್ ಪಾರ್ಕ್‌ನಲ್ಲೋ,ಬಸವನ ಗುಡಿಯ ಟ್ಯಾಕ್ಸಿ ಸ್ಟಾಂಡ್ ಬಳಿಯ ಟ್ಯಾಗೋರ್ ಸರ್ಕಲ್‌ನಲ್ಲೋ ಕುಳಿತು ವಿನೋದ ಸಲ್ಲಾಪದಲ್ಲಿ ಕಳೆದ ಸವಿನೆನಪಿದೆ. ಅವರ ಹಾಸ್ಯ ಚಟಾಕಿಗಳನ್ನು ಮಾತು ಗಳನ್ನು ಬರೆದಿಟ್ಟುಕೊಂಡಿದ್ದರೆ ಅದೇ ಜೀವನಕ್ಕೆ ಮಾರ್ಗದರ್ಶನ ಕೊಡುವ

**ನೆಟ್ಟಕಲ್ಲಪ್ಪ ಸರ್ಕಲ್ ಬಳಿಯ ಜಟಕಾ ಬಂಡಿಯವರಿಗೆ ಅವರು 'ಯಜಮಾನ್'. ಜಟಕಾ ಬಂಡಿಯವರ ಅನೇಕ ಸಮಸ್ಯೆಗಳನ್ನು ಅವರು ಬಗೆಹರಿಸುತ್ತಿದ್ದರು. ಜಟಕಾ ಸಾಹೇಬರೊಬ್ಬರಿಗೆ ಅನಾರೋಗ್ಯ ನಿಮಿತ್ತ ದುಡಿಯಲು ಆಗದಿದ್ದಾಗ ತಮ್ಮ ಕೈಲಾದ ಸಹಾಯಮಾಡಿ,ನಮಗೆ (ವೆಂಕಟರಮಣನ್ ಮತ್ತು ನಾನು) ಒಂದು ಚೀಟಿ ಕಳುಹಿಸಿ 'ಇವನು ಪ್ರಾಮಾಣಿಕ– ಅವನಿಗೇ ದುಡಿಯಲು ಆಗದಿದ್ದಾಗ ಅವನ ಕುದುರೆಯ ಗತಿಯೇನು? ನೀವು ನಿಮ್ಮ ಕೈಲಾದ ಸಹಾಯ ಮಾಡಿ' ಎಂದು ತಿಳಿಸಿದರು. ಒಬ್ಬ ಬಡ ವಿದ್ಯಾರ್ಥಿಗೆ ವಾರಾನ್ನ ಕಲ್ಪಿಸಿ ವಿದ್ಯಾವಂತನಾಗಲು ಸಹಾಯ ಮಾಡಿದರು.**





ಅಂದರೆ ಅದೊಂದು ಮಾನಸಿಕತೆ. ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ, ಆತ್ಮಾಂತರ್ಗತವಾಗಿ ಅದಕ್ಕೊಂದು ಧ್ವನಿ ಇರುತ್ತದೆ. ಬಹುಶಃ ಇದನ್ನು ಯಾರೂ ಅಲ್ಲಗಳೆಯುವುದಿಲ್ಲ ಅವನೆಷ್ಟೇ ಆಂಗ್ಲಪದ ಬಳಸಿ ಮಾತಾಡಲಿ ಹತ್ತರಲ್ಲಿ ಒಂದು ನುಸುಳಿ (ನುಸುಳಿ ಬರುವುದೇ ಪುಣ್ಯ) ಬರುವ ಕನ್ನಡ ಶಬ್ಧದ ಧ್ವನಿ, ಹೃದಯ ಬೆಸೆಯುತ್ತದೆ. ಮಾತೃಭಾಷೆಗೆ ಅಂಥದೊಂದು ಸೆಳೆತವಿದೆ. ಕನ್ನಡ ಅಂತಲ್ಲ. ಭಾರತದ ಅಧಿಕೃತ ಹದಿನಾಲ್ಕು ಭಾಷೆಗಳಾಗಲಿ, ಪ್ರಪಂಚದ ಯಾವುದೇ ಸಂಸ್ಕೃತಿಯ ಭಾಷೆಗಳು ಈ ಭಾವಕ್ಕೆ ಹೊರತಲ್ಲ. ಒಂದೇ ಭಾಷೆಯ ಇಬ್ಬರು ಮುಖಾಮುಖಿಯಾದಾಗ ಈ ಅನುಭವ ಸತ್ಯ.

ಇಂದು ಜಗತ್ತಿನ ವ್ಯಾವಹಾರಿಕ ಭಾಷೆ ಆಂಗ್ಲವಾಗಿರಬಹುದು. ಅದು ಜಗತ್ತಿನ ಹಲವು ಭಾಷೆಗಳನ್ನು ಸಾಯಿಸಿದೆ. ಇದಕ್ಕೆ ಕಾರಣ ಆಂಗ್ಲರೂ ತಮ್ಮ ಮೂಲಬಿಡದೆ ಪಸರಿಸಿದರು. ನಾವು ಮೂಲಬಿಟ್ಟು ಮೂಲೋತ್ಪಾಟನೆಯತ್ತ ಹೋಗುತ್ತಿದ್ದೇವೆ. ಸೂಕ್ಷ್ಮ ಇಷ್ಟೆ. ನಾಳೆ ಬೆಂಗಳೂರಲ್ಲ, ಎಲ್ಲ ಭಾಷೆಗಳ ರಾಜಧಾನಿಗಳೂ ಕೇಂದ್ರಾಡಳಿತ ಪ್ರದೇಶವಾಗಬೇಕಾದ ಪರಮ ಅಸಹ್ಯ ಅನಿವಾರ್ಯತೆ ಉಂಟಾಗಿ ಮರಹತ್ತದ, ತಳಕಾಣದ ತ್ರಿಶಂಕುಗಳಾಗಿ ನಾವು ಇತಿಹಾಸದಲ್ಲಿ ದಾಖಲಾಗ್ತೀವಿ ಮತ್ತು ಮಿಶ್ರತಳಿ ನಪುಂಸಕ ಪರಂಪರೆ ಸತತ ಹರಿಯುತ್ತಿರುತ್ತದೆ.

ನಾಯಕನನ್ನು ಅನುಕರಿಸಿ ಹೋಗುವ ನಾಯಿಪಾಡು ನಮ್ಮದು. ಮಹಾನಗರಗಳು ತಂದಿಟ್ಟ ಕಟುವಾಸ್ತವ. ಈ ವಿಷಯದಲ್ಲಿ (ಕನ್ನಡ) ಬೆಂಗಳೂರನ್ನೇ ಅಲ್ಲಿನ ಮನಸ್ಥಿತಿಯ ಒಟ್ಟಾರೆ ಧ್ವನಿಯನ್ನೇ ಅನಿವಾರ್ಯವಾಗಿ ದೂಷಿಸಬೇಕಾಗಿದೆ. ಕನ್ನಡಾತ್ಮಗಳು ಬೇಸರಪಡಬಾರದು. ಒಂದು ಮಹಾನಗರವಾಗಿ ಅದು ಈ ತೆರೆದಿಟ್ಟ ಬಾಗಿಲಿನ ಸನ್ನಿವೇಶದಲ್ಲಿ ಮಿಶ್ರ ಸಂಸ್ಕೃತಿಯಾಗಿ ಬೆಂಗಳೂರು ಅಥವಾ ಯಾವುದೇ ನಗರ ಬೆರೆತುಹೋಗುತ್ತದೆ. ಮೂಲ ಜನತೆ ತಮ್ಮ ಮೂಲ ಮರೆಯಬಾರದಲ್ಲ.

ವಿದ್ಯುನ್ಮಾನ ಮಾಧ್ಯಮ ಮತ್ತು ಶೈಕ್ಷಣಿಕ ರಂಗದಲ್ಲಿ ಬೀಸಿದ ಬದಲಾವಣೆಯ ಗಾಳಿಯ ಫಲಶ್ರುತಿ ಇದು. ಕಾನ್ವೆಂಟು ಶಿಕ್ಷಣವನ್ನೇ ಶ್ರೇಷ್ಠ ಎಂದು ಅದನ್ನು ಮಾತ್ರ ಬಿಂಬಿಸಿದರೆ ನಿಮಿಷ ಮಾತ್ರದಲ್ಲಿ ದೂರದರ್ಶನ ವಾಹಿನಿಗಳ ಮೂಲಕ, ಭವಿಷ್ಯದ ಚಿಂತೆಯಲ್ಲಿರುವ ಅಷ್ಟೂ ಯುವಮನಸುಗಳು ಗೊಂದಲಕ್ಕೊಳಗಾಗಿ ಅನಿವಾರ್ಯವಾಗಿ ಮನಸ್ಸು ಒಗ್ಗಿಸಿಕೊಂಡು ಬಿಡುತ್ತವೆ. ಇದೊಂಥರಾ ನಿನ್ನ ಹೆತ್ತಮ್ಮನಿಗಿಂತ, ನನ್ನ ಸಾಕಿದ ತಾಯಿ ಹೆಚ್ಚು ಪ್ರೀತಿ ತೋರಿಸುತ್ತಾಳೆ ಅಂತ' ಯಾರಲ್ಲಾದರೂ ಹೇಳಿಕೊಂಡಂತೆ.

ಭಾಷಾ ಪ್ರಯೋಗ ಪ್ರೌಢವಾಗಿದ್ದರೆ ಅಸಹ್ಯ ಅನ್ನಿಸುವುದಿಲ್ಲ. ಬ್ರಶ್ಶು, ಪೇಸ್ಟು, ಬಸ್ಸು, ಪೆನ್ನು, ಫ್ರಾಡು, ಥ್ಯಾಂಕ್ಯು, ಸಾರಿ, ಡೋಂಟ್‌ವರಿ, ಸಾರು (sir), ಮೊಬೈಲು, ಇಂಜಿನಿಯರು, ಮೋಟಾರು, ಸೈಕಲ್ಲು, ರೆಡಿಯಾಯ್ತು ಹೀಗೆ ಉಕಾರ ಪ್ರತ್ಯಯ ಮುಖಾಂತರ ಕನ್ನಡೀಕರಣಗೊಳಿಸಿ ಭಾಷೆಯನ್ನು ರಸಹೀನವನ್ನಾಗಿಸಿದ್ದೇವೆ. ಎಲ್ಲವಕ್ಕೂ ಕನ್ನಡ ಪರ್ಯಾಯ ಬಳಸಿ ಅಂತ ನನ್ನವಾದವಲ್ಲ. Brush ಅನ್ನು ಬ್ರಶ್ಶು ಅನ್ನದೇ ಇದ್ದಾಗ ಕನಿಷ್ಠ ಪಕ್ಷ ಭಾಷೆಯ ಸಂಸ್ಕಾರ ಹಾಳಾಗುವುದಿಲ್ಲ. ಭಾಷೆಯ ಶುದ್ಧಿ ಅದು ಕನ್ನಡದ್ದೇ ಇರಲಿ ಇತರ ಯಾವುದರದ್ದೇ ಇರಲೀ ನಷ್ಟವಾಗುವುದಿಲ್ಲ. ಭಾಷಾ ಪ್ರಯೋಗದಲ್ಲಿ ಸೆಳೆತ ಉಂಟು ಮಾಡಬೇಕು ಅಂತ ಮರ್ಯಾದೆಯ ಮೇರೆ ಮೀರಿ ರೇಪು, ಮರ್ಡರ್ರು ಅಂತ ಬರೆದ್ರೆ ಅಸಂಬದ್ಧ ಅನ್ಸಲ್ವಾ. ನಮಗೆ ಲಯಬದ್ಧ, ಮಾತ್ರೆ ಬದ್ಧ ಸಾಹಿತ್ಯ ರಚಿಸಲಾರದಕ್ಕೆ ಇಂದಿನ ಹಾಡುಗಳು ಸಂಭಾಷಣೆಯಂತೆ ಕೇಳಿ ಒಣ ಅನಿಸಿ ಮನದಿಂದ ಮರೆಯಾಗುವುದು.

ನಮಗೂ ಏನ್ ಗೆಳೆಯಾ ಆರಾಮಾ? ಅನ್ನೋದಕ್ಕಿಂತ ಏನ್ ಮಚ್ಚಾ helath ಬೆಟರ್‍ರಾ sorry ಕಣೋ ಟೂರ್ ಹೋಗಿದ್ದೆ ನಿನ್ನ mis ಮಾಡ್ದೆ, dont be hesitite be cool ಫ್ರೆಶ್ಶಾಗು, ಟಿಫಿನ್ ಮಾಡೋಣ, (ಏನಿದು ಅಸಡ್ಡಾಳತನ) ಅನ್ನೋದೇ ಆಕರ್ಷಕ. ಆದ್ರೆ ನಾಳೆ ಬೆಂಗಳೂರಲ್ಲ, ಎಲ್ಲ ಭಾಷೆಗಳ ರಾಜಧಾನಿಗಳೂ ಕೇಂದ್ರಾಡಳಿತ ಪ್ರದೇಶವಾಗಬೇಕಾದ ಪರಮ ಅಸಹ್ಯ ಅನಿವಾರ್ಯತೆ ಉಂಟಾಗಿ ಮರಹತ್ತದ, ತಳಕಾಣದ ತ್ರಿಶಂಕುಗಳಾಗಿ ನಾವು ಇತಿಹಾಸದಲ್ಲಿ ದಾಖಲಾಗ್ತೀವಿ ಮತ್ತು ಮಿಶ್ರತಳಿ ನಪುಂಸಕ ಪರಂಪರೆ ಸತತ ಹರಿಯುತ್ತಿರುತ್ತದೆ.

ಒಳ್ಳೆಯದನ್ನು ಅನುಸರಿಸೋಣ. ಆ ಭರದಲ್ಲಿ, ಪರವನ್ನು ಆಲಂಗಿಸುವ ಬಿಗಿಯಲ್ಲಿ ನಾವು ಮುಕರಿಕೊಂಡು, ಒಳ್ಳೆಯವಳಾದ ನಮ್ಮ ತಾಯಿ ಉಸಿರುಗಟ್ಟಿ ಸಂಕಟಪಡುತ್ತಿದ್ದಾಳೆ ಎಂಬುದು ಅರ್ಥ ಮಾಡಿಕೊಳ್ಳಬೇಕು. ನಾಡು ನುಡಿಯ ನೀರು ಬೇರು ಇದ್ದರೆ ನಮ್ಮ ನಿಜವಾದ ಬೆಳವಣಿಗೆ. ಅದಿಲ್ಲದೆ ಅಕ್ಕನನ್ನು ಹುಡುಕಿ ಅಮೆರಿಕಕ್ಕೆ ಹೋಗಿ ಬಂದರೂ ನಮ್ಮ ಕಥೆ ಹೀನಾಮಾನವೇ. ನಮ್ಮನ್ನು ನಾವು ತಿದ್ದಿಕೊಂಡರೆ ಜಗದಲೊಬ್ಬ ಮೂರ್ಖ ಕಡಿಮೆಯಾದಂತೆ. ಹಾಗೆ ನಾವು ತಿದ್ದಿಕೊಂಡು ನಮ್ಮ ಸಂಖ್ಯೆ ವೃದ್ಧಿಯಾದರೆ ಕನ್ನಡಮ್ಮನಿಗೆ ಆದ ಗಾಯಕ್ಕೆ ನಾವು ಮಾಡುವ ಆರೈಕೆ. ಅಕೇರಿಯಲ್ಲಿ ಒಂದು ಮಾತು ಅನಿವಾರ್ಯವಾಗಿ ಮಿಶ್ರಪದಗಳ ಬಳಕೆ ಮಾಡಿದ್ದಕ್ಕೆ ತಮ್ಮೆಲ್ಲರ ಕ್ಷಮೆ ಕೇಳುತ್ತೇನೆ. ಮನ್ನಿಸುವಿರೆಂಬ ನಂಬುಗೆಯೊಂದಿಗೆ.

**– ಸಂಜಯ್ ಭಟ್ ಬೆಣ್ಣೆ, ಶಿರಸಿ**

## ಎಲ್ಲೆಲ್ಲಿ ಹುಡುಕಲಿ?

## ಎಲ್ಲಂತ! ಹುಡುಕಲಿ ?

# ಓ ನನ್ನ ಕನ್ನಡ !!

ನಿಜ ನಂಗಂತೂ ಹಾಗೇ ಅನಿಸುತ್ತಿದೆ. ಕನ್ನಡ ರಾಜ್ಯೋತ್ಸವದ ದಿನ ನಾಡಗೀತೆ ಕೇಳಿದಾಗ, ಮಧುರ ನೆನಪೊಂದರ ಮಡಿಲಿಗೆ ಹೋಗಿ ಬಂದಂತೆನಿಸುತ್ತದೆ. ನಾವು ಕನ್ನಡ ಶಾಲೆಗೆ ಹೋಗ್ತಿದ್ದಾಗ ನಾಡಗೀತೆ, ರಾಷ್ಟ್ರಗೀತೆ ಬೆಳಗಿನ ಪ್ರಾರ್ಥನೆ ಆಗಿತ್ತು.

ಅದೇನು ಬಹಳ ಕಾಲ ಆಗಿಲ್ಲ. ಹದಿನಾಲ್ಕು ಹದಿನೈದು ವರ್ಷಗಳ ಹಿಂದೆ. 1990 ರ ದಶಕದ ನೆನಪಿದು. ಪ್ರಾಥಮಿಕ ಶಾಲೆ ಅಂದರೆ ನಮಗೂ, ನಮ್ಮಪ್ಪ ಅಮ್ಮಂದಿರಿಗೂ ಸಮಕಾಲೀನರೆಲ್ಲರಿಗೂ ತುಸೂ ಗೊಂದಲ. ಅದೇ ಕನ್ನಡ ಶಾಲೆ ಅಂದರೆ ಹೃದಯ ಕೋಡಂಗಿ ಅದೆಂಥದೋ ಉತ್ಸಾಹ. ಪ್ರಾಥಮಿಕ ಶಾಲೆಯೆಂಬುದು ಕನ್ನಡ ಶಾಲೆಯಾಗಿ ಹೃದಯಸ್ಥಿತವಾಗಿರುವಾಗ, ಆಂಗ್ಲ ಮಾಧ್ಯಮ ಶಾಲೆ ಎಂಬ ಗುಮ್ಮ ಬಂತು. ಬಿಸಿಲಲ್ಲಿ ಬಿಸಿಗಡುಬು ಗಂಟಲಿಗೆ ತುರುಕಿದಂತೆ. ನಾಡಗೀತೆ ರಾಜ್ಯೋತ್ಸವದ ದಿನಕ್ಕೆ ಬಂದು ನಿಂತಿತು. ನಿಜಕ್ಕೂ ದುಃಖ ಆಗ್ತಿದೆ ನಂಗೆ. ಒಂದೇ ಒಂದು ಆಂಗ್ಲ ಪದ ಬಳಸದೆ ಮಹಾಪ್ರಬಂಧವನ್ನೇ ಬರೆಯುವ ಆತ್ಮವಿಶ್ವಾಸವಿರುವ ನಾನೂ, ನನ್ನಂಥ ಅನೇಕರು ತೊಳಲಾಡುತ್ತಿದ್ದೇವೆ. ಯಾಕೆ ಗೊತ್ತಾ ಸರಳಗನ್ನಡದಲ್ಲಿ ಬರೆದರೆ ಅದ್ಯಾವ ಭಾಷೆ ಅಂತ ಪ್ರಶ್ನೆ ಎದುರಾಗುವ ಸ್ಥಿತಿ.

ಈ ದುಃಖವನ್ನು ಅನುಭವಿಸುತ್ತಲೇ ಈ ಪುಟ್ಟ ಲೇಖನದಲ್ಲಿ, (ಆಶಯ ಬರಹ ಅಂತಾನೇ ಅಂದ್ಕೊಳ್ಳಿ) ಆಂಗ್ಲಪದ ಬಳಕೆ ಮಾಡಲೇಬೇಕಾಗಿದೆ ಕಾರಣ ಎತ್ತಿಕೊಂಡಿರುವ ವಿಷಯ ಅಂಥದ್ದು.

ವಾಸ್ತವದಲ್ಲಿ ನನಗೆ ಆಂಗ್ಲಭಾಷೆಯ ಮೇಲೆ ದ್ವೇಷವಿಲ್ಲ. ನಮ್ಮವರು ಬಳಸಬಾರದ ರೀತಿಯಲ್ಲಿ, ಬಳಸಬಾರದ ಶೈಲಿಯಲ್ಲಿ, ಬಳಸಬಾರದ ಮಟ್ಟದಲ್ಲಿ, ಬಳಸಬಾರದ ಪ್ರಮಾಣದಲ್ಲಿ ಬಳಸುತ್ತಿರುವುದು ಕಂಡು ವಾಕರಿಕೆ ಬರುವಷ್ಟು ರೇಜಿಗೆಯಾಗುತ್ತಿದೆ. ನಾವು ಹಳ್ಳಿ ಮಕ್ಕಳು, ಪಡಪೋಶಿ ಹೈಕಳು ಬೆಂಗಳೂರು ಬಸ್ ನಿಲ್ದಾಣದಲ್ಲಿ ನಿಂತು ಸ್ವಾಮಿ ಹನ್ನೆರಡುಗಂಟೆ ಗಿರಿನಗರ ಬಸ್ ಹೋಯ್ತಾ? ಅಂತ ಕೇಳಿದರೆ ಬಾಕಿಯವರು ಹೋಗ್ಲಿ, ನಿರ್ವಾಹಕ ಕೂಡ ತಲೆಯೆತ್ತಿ ನೋಡಲ್ಲಾ, ನಿರ್ವಾಹಕ ಅಂದ್ರೆ ಗೊತ್ತಾಯ್ತು ಅಂದುಕೊಳ್ತೇನೆ. ಕಂಡಕ್ಟರ್‌ಗೆ ಅಲ್ವಾ ನೀವು ಹೇಳಿದ್ದು ಅಂತ ಕೇಳಬೇಡಿ. ಅದೇ ನಿರ್ವಾಹಕನಿಗೆ ಸರ್ 12$^0$ clock ಗಿರಿನಗರ್ ಮಿಸ್ ಮಾಡ್ಕೊಂಡೆ ಅನ್ಸತ್ತೆ. am i right sir ಅಂದ್ರೆ ಆತ ಅಂತೂ ಇಂತೂ ಪ್ರೀತಿ ಬಂತು ಅನ್ನೋ ಹಾಗೆ ಇರ್ಬಹುದು ಗೊತ್ತಿಲ್ಲ ಅಂತಾನೆ. ಇರಬಹುದು ಗೊತ್ತಿಲ್ಲಾ ಅನ್ನೋ ಉತ್ತರ ಪಡಕೊಳ್ಳೋಕೆ ಈ ಮಸ್ಕಾ ಹೊಡೀಬೇಕು. ದುಃಖ ಆಗಲ್ವಾ? ಸಿಟ್ಟು ಬರಲ್ವಾ! ?

ಖಂಡಿತ ನಾನು ಯಾರ ಮೇಲೂ ಅಪರಾಧ ಹೊರಿಸುತ್ತಿಲ್ಲ. ವಾಸ್ತವದ ಪ್ರತಿಮೆಗಳನ್ನು ಉದಾಹರಣೆಯಾಗಿ ಹೆಕ್ಕಿಡುತ್ತಿದ್ದೇನೆ ಅಷ್ಟೆ. ಅ, ಆ, ಇ, ಈ ಯಿಂದ ಶುರುಮಾಡಿ ಲ, ಕ್ಷ, ಜ್ಞ ವರೆಗೆ ಸ್ವರ, ವ್ಯಂಜನ ಖ, ಚ, ಟ, ತ, ಪಾ...ದಿಗಳ ಬಳ್ಳಿಗಳ ಬಾಯಿಪಾಠ ಮಾಡಿಸುತ್ತಿದ್ದ ಆಯಿ, ಅಬ್ಬೆಯರು ನೆನಪಾಗುತ್ತಾರೆ. ಲೇಖನಿಯಲ್ಲೇ ಇರಲಿ, ಬಳಪದ ಕಡ್ಡಿಯಲ್ಲಿ ಪಾಟಿಯ ಮೇಲೇ ಇರಲಿ ಅಮ್ಮ ಅಕ್ಷರ ತಿದ್ದಿಸುತ್ತಿದ್ದಳು. ಅಕ್ಷರ ದುಂಡಗಾಗುತ್ತಿತ್ತು. ಬಹುತೇಕ ಬಹಳಷ್ಟು ಜನರದ್ದು. ಇಂದು ಅದು ಉಂಟಾ?

ಎ, ಬಿ, ಸಿ, ಡಿಯಿಂದ ಕಲಿಕೆ ಆರಂಭ. ಮಗು ಯಾರಲ್ಲಿ ಆತ್ಮೀಯವಾಗಿ, ಒಡನಾಡಿದರೂ ಅವ್ಯಾವವೂ ಅಮ್ಮನ ಮಡಿಲಷ್ಟು ಹಿತವಲ್ಲ ತಾನೆ!? ಮಗುವಿಗೆ ಯಾವ ಭಾಷೆ ಬೇಕಾದರೂ ಕಲಿಸಿ ಮಾತೃಭಾಷೆಯಲ್ಲಿ ಮಗು ಸಮರ್ಥವಾಗಲಿ.

ಅಖಂಡ (ಅಖಿಲ) ಭಾರತದಲ್ಲಿ ಭಾಷಾವಾರು ತಿಳುವಳಿಕೆಯಲ್ಲಿ ಒಂದು ಸೂತ್ರಕ್ಕೆ ಬದ್ಧರಾದ ನಾವು ಆ ಸೂತ್ರಕ್ಕೆ ಲೆಕ್ಕವಿಲ್ಲದಷ್ಟು ಶಸ್ತ್ರಚಿಕಿತ್ಸೆ ಮಾಡಿಬಿಟ್ಟಿದ್ದೇವೆ.

ಬಿಂಕಕ್ಕೋ, ಅಂತಸ್ತಿಗೋ ಗೊತ್ತಿಲ್ಲ ಆಂಗ್ಲಭಾಷೆ ಬಳಕೆ ಅವ್ಯಾಹತವಾಗಿದೆ ಈಗ. ಹೀಗೆ ಹೇಳಿದರೆ poor fellow ತನಗೆ ಬರುವುದಿಲ್ಲ ಅದ್ಕಾಗಿ ಹಾಗಂತಾನೆ ಅಂತ ಕಿಚಾಯಿಸ್ತಾರೆ. ಗೋಳಲ್ಲವಾ? ಇದು. ಮಾತೃಭಾಷೆ ಯಾಕೆ ಮಹತ್ವ








ಪುಸ್ತಕವಾಗುತ್ತಿತ್ತು.ಅವರ ಪ್ರೀತಿ ವಾತ್ಸಲ್ಯಗಾಢವಾದದ್ದು. ಹೊರಗಿನಿಂದ ನೋಡಲು ಕಠಿಣರು ಎನ್ನಿಸಿದರೂ ಹೃದಯ ಮೃದು. ಭವಭೂತಿಯ "ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ" ಎಂಬ ಮಾತನ್ನು ಸ್ಮರಿಸಬಹುದು. ಪು.ತಿ.ನ ಅವರಿಗೆ ಬರೆದ ಕಾಗದದಲ್ಲಿ " ಮೈತ್ರಿಯೇ ನನಗೆ ಬೇಕಾದ ಭಾಗ್ಯ. ಇತರ ಭಾಗ್ಯವನ್ನು ನಾನು ಹೆಚ್ಚಾಗಿ ಬಯಸುವುದಿಲ್ಲ. ದೇವರು ನನಗೆ ಪ್ರೀತಿ,ಮಮತೆಗಳುಳ್ಳ ಸ್ನೇಹದ ಸಂತೋಷವನ್ನು ಸರ್ವದಾ ಕರುಣಿಸಲಿ" ಎಂದಿದ್ದಾರೆ. ಅವರ ಪ್ರೀತಿ ವಾತಲ್ಯಕ್ಕೆ ಭಾಗಿಯಾಗುವ ಅನುಗ್ರಹ ನನಗೆ ಲಭ್ಯವಾಗಿತ್ತು.ಅವರ ಬಾಳಿನ ಸಂಗಾತಿಯೂ ಬೆಳಕೂ ಆಗಿದ್ದ ಅವರ ಪತ್ನಿ ಭಾಗೀರಥಮ್ಮನವರು 9-3-1924 ರಲ್ಲಿ ಅಕಾಲ ಮೃತ್ಯುವನ್ನಪ್ಪಿದರು. ಅವರೂ ರಸಿಕರು; ಕವನಗಳನ್ನು ರಚಿಸಿದ್ದರು. ಡಿವಿಜಿಯವರಿಗೆ ಅವರ ನೆನಪು ಅಳಿದಿರಲಿಲ್ಲ. 1961 ರಲ್ಲಿ ನನಗೆ ಬರೆದ ಒಂದು ಕಾಗದದಲ್ಲಿ ''There was a time when I could not help weeping and sighing at separation from dear one .That was before 1925.My heart is rock. No ಆಸ್ಥಾನ ಕಾರುಣ್ಯ and ಧರ್ಮ -pleasant or harsh. this is hard lesson life has taught me" ಎಂದಿದ್ದಾರೆ.ಅನೇಕ ದಶಕಗಳು ಕಳೆದಿದ್ದರೂ "ಹೊರಗೆ ಲೋಕಾಸಕ್ತಿ ಒಳಗೆ ಸಕಲ ವಿರಕ್ತಿ" ರೂಢಿಸಿಕೊಂಡಿದ್ದರೂ,ಕಷ್ಟಗಳ ಸುರಿಮಳೆಯನ್ನೇ ಸಹಿಸಿದರೂ ಒಳಗಿನ ಗಾಯ ಮಾದಿರಲಿಲ್ಲ. 'ಬಗೆಯಲ್ ವಾಂಛೆಯಗೆಲ್ವುದೇ ಸುಖಮಲ್ತೆ' ಎಂದರೂ ಸ್ನೇಹ,ಪ್ರೀತಿ ಇಲ್ಲದ ಜೀವ ಬರಡಲ್ಲವೇ? ಅವರ ಸ್ನೇಹದ ಚಿಲುಮೆ ಬತ್ತಲೇ ಇಲ್ಲ.

ಅವರು ರಸಿಕರು. ಅವರ ಅಟ್ಟದ ಮೇಲಿನ ಲೈಬ್ರರಿಯಲ್ಲಿ ಕಾವ್ಯಾಲಾಪನೆಯಲ್ಲಿ ಅನೇಕ ದಿನಗಳನ್ನು ಕಳೆದೆವು. ಅವರ ಸಂಗೀತ ಜ್ಞಾನ ಅಪಾರ. ಅನೇಕ ಮಹಾ ವಿದ್ವಾಂಸರುಗಳು ಡಿವಿಜಿಯವರು ತಮ್ಮ ಸಂಗೀತ ಕಛೇರಿಗೆ ಬಂದರೆ ಅದು ತಮ್ಮ ಭಾಗ್ಯ ಎಂದು ತಿಳಿದಿದ್ದರು.

ಅವರ ಮನೆಯ ಮುಂದಿನ ಕೋಣೆಯಲ್ಲಿ ಒಂದು ಯುವತಿಯ ಸುಂದರ ಮುಖಚಿತ್ರ, ಕಪ್ಪಾದ ತುರುಬು ಹಾಕಿಕೊಂಡಿದ್ದಳು, ಅದರಲ್ಲೊಂದು ಗುಲಾಬಿ. ಅದನ್ನು ತೋರಿಸಿ 'ಅಲಂಕಾರ' ಶಬ್ದಕ್ಕೆ ಅವರು ಮಾಡಿದ ವಿವರಣೆ ಹೀಗಿದೆ. 'ಎಷ್ಟು ಇದ್ದರೆ ನೋಡಲು ಚೆನ್ನೋ, ಎಷ್ಟು ಇದ್ದರೆ ಮನಸ್ಸಿಗೆ ಹಿತವಾಗುತ್ತದೋ ಅದು ಅಲಂಕಾರ'.

ಅವರಿಗೆ ಪ್ರಜಾಪ್ರಭುತ್ವದಲ್ಲಿ ಅಚಲವಾದ ನಂಬಿಕೆ. ಇದೇ ಕಾರಣ ಅವರ ಸ್ನೇಹಿತರಾದ ದಿವಾನ್ ಮಿರ್ಜಾ ಇಸ್ಮಾಯಿಲ್ ಜೊತೆ ಸ್ವಲ್ಪ ಕಾಲ ವಿರಸವಾಗಿತ್ತು. ಪ್ರಜಾಪ್ರಭುತ್ವ ಯಶಸ್ವಿಯಾಗಲು ರಾಷ್ಟ್ರಕನು (ಸಿಟಿಝುನ್) 'well informed' ಆಗಿರಬೇಕು ಎಂಬುದು ಅವರ ಧೃಡ ನಂಬಿಕೆ ಯಾಗಿತ್ತು. 'ಜ್ಞಾನಿನ ಚರಿತುಂ ಶಕ್ಯಂ ಸಮ್ಯಕ್ ರಾಜ್ಯಾದಿ ಲೌಕಿಕಂ' ಎಂಬ ವಿದ್ಯಾರಣ್ಯ ಮುನಿಗಳ ವಚನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಧ್ಯೇಯ ವಾಕ್ಯ.

ಸಾರ್ವಜನಿಕ ಸಂಸ್ಥೆಯ ಹಣಕಾಸಿನ ವ್ಯವಹಾರದಲ್ಲಿ ಅವರದು ಸದಾ ಎಚ್ಚರ . ಒಂದು ಸಂಜೆ ಅವರ ಮನೆಗೆ ಬಂದ ಮಹನೀಯರೊಬ್ಬರು ಗೋಖಲೆ ಸಂಸ್ಥೆಗೆ ಎರಡು ರೂಪಾಯಿ ಕಾಣಿಕೆ ಕೊಟ್ಟರು.ಆಗ ನಾನೂ ಅವರ ಮನೆಯಲ್ಲಿದ್ದೆ. ಕಾಣಿಕೆ ಅತ್ಯಲ್ಪ ಎಂಬ ಅಸಡ್ಡೆಯಿಲ್ಲ. ಆ ಹಣವನ್ನು ನನ್ನ ಕೈಗೆ ಕೊಟ್ಟು ಸಂಸ್ಥೆಗೆ ತಲುಪಿಸಿ ರಸೀದಿ ತಂದು ಈ ಮಹನೀಯರಿಗೆ ಕೊಡು ಎಂದು ಹೇಳಿದರು.

ಅವರು ರಾಜಕೀಯದಲ್ಲಿ 'ಲಿಬರಲ್'. ರಷ್ಯಾದ ಮಹಾಕ್ರಾಂತಿಯಲ್ಲಾದ ಹತ್ಯಾಕಾಂಡ ಅವರಿಗೆ ಸರಿ ಅನಿಸಲಿಲ್ಲ. ಇದನ್ನು ಎಲ್ಲರೂ ಒಪ್ಪಬೇಕಾದ್ದೇ. ಆದರೆ ಜಮೀನ್ದಾರ್ ಗಳು ,ಶ್ರೀಮಂತರು ಮಾಡಿದ ಹಿಂಸೆ ,ಅನಾಚಾರಗಳಿಗೆ ಇದು ಪ್ರತಿಕ್ರಿಯೆ ಎಂದು ನನ್ನ ವಾದ (ವ್ಯಾಸಂಗ ಗೋಷ್ಠಿಯಲ್ಲಿ Acton ನ ಹಿಸ್ಟರಿ ಅಧ್ಯಯನ ಮಾಡುತ್ತಿದ್ದಾಗ ಎಂದು ಜ್ಞಾಪಕ) ಈ ವಾದ ಅವರಿಗೆ ಸರಿ ಎನಿಸಲಿಲ್ಲ.ಅದನ್ನು ಸಕಾರಣವಾಗಿ ತಿಳಿಸಿದರು.ಅವರು ಎಂದೂ ನಾನು ಹೇಳಿದ್ದೇ ಸರಿ ಎನ್ನುತ್ತಿರಲಿಲ್ಲ.ಇದು ವ್ಯಾಸಂಗ ಗೋಷ್ಠಿಯ ಅಧ್ಯಯನ ರೀತಿಗೆ ಒಂದು ಉದಾಹರಣೆ.ಅವರು ಯಾವಾಗಲೂ ಚಿಂತನಾಶೀಲರು. ಮಾರ್ಥಾ ಆಸ್ಪತ್ರೆಯಲ್ಲಿ ಖಾಯಿಲೆಯಿಂದ ಮಲಗಿದ್ದಾಗಲೂ ಅವರ ಮನಸ್ಸು ಕ್ರಿಯಾಶೀಲವಾಗಿತ್ತು .ಆಗಲೇ 'ದೇವರು' ಎಂಬ ಪುಸ್ತಕವನ್ನು ಅವರು ಮಿತ್ರ ವೆಂಕಟರಮಣನ್ ಅವರಿಗೆ ಡಿಕ್ಟೇಟ್ ಮಾಡಿದ್ದು.



ಅನೇಕರಿಗೆ ಕಗ್ಗ , ಜೀವನಧರ್ಮಯೋಗ(ಗೀತಾ ತಾತ್ಪರ್ಯ) ಪಾರಾಯಣ ಗ್ರಂಥ , ಇರಲಿ.ಆದರೆ ನಾವು ಕಿರಿಯರ ಮನಸ್ಸನ್ನು ರೂಪಿಸಬೇಡವೇ? ಇದಕ್ಕೆ ಪೂರಕಗಳು ಅವರ "ನಿವೇದನ", "ವಸಂತಕುಸುಮಾಂಜಲಿ" ಮೊದಲಾದ ಕವನಸಂಕಲನಗಳು. ಮಕ್ಕಳಲ್ಲಿ ಕುತೂಹಲ ಹೆಚ್ಚು. ಅದಕ್ಕಾಗಿ ಅವರಿಗೆ ಕಥೆ ಹೇಳಬೇಡವೆ? ಡಿ.ವಿ.ಜಿ ಅವರ 'ಬೆಕ್ಕೋಜಿ','ಇಂದ್ರವಜ್ರ' ಇಂತಹವು ಮಕ್ಕಳ ಕುತೂಹಲ ತಣಿಸಬಲ್ಲ ಕಥಾಗುಚ್ಚಗಳು.

ಮಹಾತ್ಮ ಗಾಂಧಿಯವರ ಕುರಿತು ಡಿ.ವಿ.ಜಿ ಯವರು ಬರೆದ ಈ ಸೊಗಸಾದ ಚಿತ್ರಣ ಡಿ.ವಿ.ಜಿ ಯವರ ಜೀವನಕ್ಕೇ ಅನ್ವಯಿಸುವಂತಹುದು.

ಇಂದ್ರಿಯಂಗಳ ಜಯಿಸಿ, ಚಿತ್ತಶುದ್ಧಿಯ ಬಯಸಿ,
ಲೋಭವಂ ತ್ಯಜಿಸಿ ರೋಷವವರ್ಜಿಸಿ।
ಸರ್ವಸಖ್ಯವ ಭಜಿಸಿ ತೃಪ್ತತೆಯನಭ್ಯಸಿಸಿ,
ಸತ್ಯಪಾಲನೆಯೊಂದ ಮನದೊಳುಳಿಸಿ।
ಕಾಯಕಷ್ಟವ ಸಹಿಸಿ ವೈರಿಗಣಮಂ ಕ್ಷಮಿಸಿ,
ಸರ್ವ ಸಮತೆಯ ಗಳಿಸಿ ಶಮವನರಸಿ।
ಸ್ವಾತ್ಮಶಿಕ್ಷಣವೇ ಸ್ವರಾಜ್ಯಮೆನ್ನುತ ವಚಿಸಿ,
ದೇಶಸೇವೆಯನೀಶಸೇವೆಯೆನಿಸಿ।
ಸಾಧುವೃತ್ತಿಯ ಪಥವ ತನ್ನ ಬಾಳಿನೊಳೆ ತೋರಿ,
ಪಾಶವೀ ಬಲದ ದೌರ್ಬಲ್ಯಮಂ ವಿಶದಪಡಿಸಿ
ಪಾಶ್ಚಾತ್ಯ ಜನಕಧ್ಯಾತ್ಮ ನೀತಿಯನು ಪೇಳ್ದಾ,
ದೈವ ಸಂಪನ್ಮಾರ್ಗ ದರ್ಶಕಂ ಗಾಂಧಿಯಲ್ತೆ॥

(ವಸಂತ ಕುಸುಮಾಂಜಲಿ)

ಡಿವಿಜಿಯವರು ತಮ್ಮನ್ನು ತಾವು 'ಬ್ರಹ್ಮಪಟ್ಟಣದಿಂದ ಬಂದ ಒಬ್ಬ ಭಿಕ್ಷುಕ' ಎಂದು ಕರೆದುಕೊಂಡಿದ್ದಾರೆ. ಆ ಮಹನೀಯರ ಸಾಮೀಪ್ಯ, ಸಹವಾಸ,ಪರಿಚರ್ಯೆಯ ಅವಕಾಶ ದೊರೆತದ್ದು ನನ್ನ ಭಾಗ್ಯ. ಆ ಪುಣ್ಯ ಚೇತನಕ್ಕೆ ನಮನ.





**4) ಗಣಪತಿ ದೇವಸ್ಥಾನದ ಪುನಃ ಪ್ರತಿಷ್ಠಾಪನೆ:** ಉತ್ತರ ಟೆಕ್ಸಾಸ್‌ನ ಪ್ಲೇನೋ ಎಂಬ ನಗರದ ಹಿಂದೂಗಳ ಅವಿಭಾಜ್ಯ ಅಂಗ ಶ್ರೀ ಗಣೇಶ ದೇವಾಲಯ. ಅದು ಇಷ್ಟು ದಿವಸ ಒಂದು ಶಾಪಿಂಗ್ ಸೆಂಟರ್‌ನಲ್ಲಿತ್ತು. ಇಲ್ಲಿಗೆ ಭಕ್ತರು ಪ್ರತಿ ದಿನವೋ, ವಾರವೋ ಬಂದು ದೇವರನ್ನು ಪ್ರಾರ್ಥಿಸಿ ಹೋಗುತ್ತಿದ್ದರು. ಈ ಮಂದಿರವನ್ನು ಹುಟ್ಟುಹಾಕಿದ ಕೀರ್ತಿ ನಮ್ಮ ಮಲೆಯಾಳಿ ಬಂಧುಗಳಿಗೆ ಸೇರುತ್ತದೆ. ಆದರೆ ಇದರ ಭಕ್ತ ಸಮುದಾಯ ನೋಡಿದರೆ ಭಾಷೆ, ರಾಜ್ಯ, ರಾಷ್ಟ್ರ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಇಲ್ಲಿಗೆ ಎಲ್ಲರೂ ಬರುತ್ತಾರೆ.ಭಕ್ತರ ಸಂಖ್ಯೆ ಬೆಳೆಯುತ್ತಿದ್ದಂತೆ ಜಾಗದ ಕೊರತೆ ಹೆಚ್ಚಾಯಿತು. ಹಲವು ಮೂಲಗಳಿಂದ ಹಣ ಸಂಗ್ರಹಿಸಿ ಇಲ್ಲೇ ಹತ್ತಿರದಲ್ಲಿ ಒಂದು ಹತ್ತು ಎಕರೆ ಜಾಗದಲ್ಲಿ ಒಂದು ಮನೆ, ಉಗ್ರಾಣವಿರುವ ಸೌಲಭ್ಯವನ್ನು ವರ್ಷದ ಹಿಂದೆ ಖರೀದಿ ಮಾಡಿ, ನವೆಂಬರ್ 8 ರಂದು ದೇವಸ್ಥಾನವನ್ನು ಹೊಸ ಸ್ಥಳಕ್ಕೆ ವರ್ಗಾಯಿಸಲಾಯಿತು. ವರ್ಗಾಯಿಸುವಾಗ ನಡೆದ ಮೆರವಣಿಗೆ, ಸಾಂಪ್ರದಾಯಿಕ ಪೂಜೆ, ಹೋಮ–ಹವನ, ಸ್ಥಳೀಯ ಹಿಂದೂ ಜನರ ಉತ್ಸಾಹ ನಿಜಕ್ಕೂ ಹೆಮ್ಮೆ ತರುವಂಥಾದ್ದು. ಎರಡು ದಿನ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ಈ ದೇವಸ್ಥಾನದ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಈ ಮಾಹಿತಿ ಜಾಲವನ್ನು ನೋಡಿ. (http://htnt.org/).



ಅಮೆರಿಕಾದ ಎಲ್ಲಾ ದೇವಸ್ಥಾನಗಳ ಸಾಮಾನ್ಯ ನೋಟವೆಂದರೆ ಶುಚಿತ್ವ ಮತ್ತು ನಿಯಮ ಪಾಲನೆ.ಯಾವುದೇ ವಸ್ತು, ವ್ಯಕ್ತಿ, ಜಾಗದಿಂದ ದೂರ ಹೋದಷ್ಟೂ ಅದರ ಬಗ್ಗೆ ಭಾವನೆ, ನಂಬಿಕೆ ಜಾಸ್ತಿಯಾಗುತ್ತದಂತೆ. ಭಾರತದಲ್ಲಿ ದೇವಸ್ಥಾನದ ಮುಖವನ್ನೂ ನೋಡದ ಎಷ್ಟೋ ನಮ್ಮ ಯುವಕರೂ ಇಲ್ಲಿ ದೇವಸ್ತಾನಕ್ಕೆ ನಿರಂತರವಾಗಿ ಬಂದು ನಿಜವಾದ ಭಕ್ತರ ಸಾಲಿಗೆ ಸೇರುತ್ತಾರೆ. ಇದಕ್ಕಿಂತ ಹೆಚ್ಚಿಗೆ ಖುಷಿ ಕೊಡುವುದು ಇಲ್ಲಿಯ ಭಾರತೀಯ ಮೂಲದವರು ವಿವಿಧ ಆಕರಗಳಿಂದ ಹಣ ಸಂಗ್ರಹಿಸಿ, ಭಾರತದ ಹಲವಾರು ಕ್ಷೇತ್ರಗಳಲ್ಲಿ ಸಹಾಯ ಮಾಡಿ, ಅಭಿವೃದ್ಧಿಯ ಪಥಕ್ಕೆ ಕರೆದೊಯ್ಯುತ್ತಿರುವುದು.

ಈ ದೇವಸ್ಥಾನದಲ್ಲಿ ಪ್ರತಿದಿನ ಪೂಜೆ, ಮಹಾ ಮಂಗಳಾರತಿ ಮಾಡುತ್ತಾರೆ. ಮಂಗಳಾರತಿಯ ಮುನ್ನ ಹೇಳುವ ಶ್ಲೋಕ/ಮಂತ್ರವನ್ನು ಎಲ್ಲರೂ ಒಟ್ಟಿಗೆ ಹೇಳಬಹುದು. ಆ ಹೊತ್ತಿಗೆ ಎಲ್ಲರ ಕೈಗೂ ಒಂದೊಂದು ಹಸ್ತಪ್ರತಿಯನ್ನು ಕೊಡುತ್ತಾರೆ ಅದನ್ನು ನೋಡಿಕೊಂಡು ನಮ್ಮ ಸ್ವರ ಸೇರಿಸಬಹುದು.

ಇಲ್ಲಿನ ಎಲ್ಲಾ ದೇವಸ್ಥಾನಗಳ ಸಾಮಾನ್ಯ ನೋಟವೆಂದರೆ ಶುಚಿತ್ವ ಮತ್ತು ನಿಯಮ ಪಾಲನೆ, ಎಲ್ಲರೂ ನಿಯಮ ಪಾಲನೆ ಮಾಡುವುದರಿಂದ ಎಲ್ಲೂ ಗೊಂದಲವಾಗಲಿ, ನೂಕು ನುಗ್ಗಲಾಗಲಿ, ಅಸಮಾಧಾನವಾಗಲಿ ತೋರುವುದಿಲ್ಲ.ಯಾವುದೇ ವಸ್ತು, ವ್ಯಕ್ತಿ, ಜಾಗದಿಂದ ದೂರ ಹೋದಷ್ಟೂ ಅದರ ಬಗ್ಗೆ ಭಾವನೆ, ನಂಬಿಕೆ ಜಾಸ್ತಿಯಾಗುತ್ತದಂತೆ. ಭಾರತದಲ್ಲಿ ದೇವಸ್ಥಾನದ ಮುಖವನ್ನೂ ನೋಡದ ಎಷ್ಟೋ ನಮ್ಮ ಯುವಕರೂ ಇಲ್ಲಿ ದೇವಸ್ತಾನಕ್ಕೆ ನಿರಂತರವಾಗಿ ಬಂದು ನಿಜವಾದ ಭಕ್ತರ ಸಾಲಿಗೆ ಸೇರುತ್ತಾರೆ. ಒಟ್ಟಿನಲ್ಲಿ ಹಿಂದೂ ಧಾರ್ಮಿಕ ಕ್ಷೇತ್ರಗಳು ಅಮೇರಿಕದಲ್ಲಿ ಹಿಂದೂಗಳನ್ನು ಒಟ್ಟುಗೂಡಿಸುವುದರಲ್ಲಿ ಮಹತ್ತರ ಪಾತ್ರ ವಹಿಸಿದೆ. ಇದಕ್ಕಿಂತ ಹೆಚ್ಚಿಗೆ ಖುಷಿ ಕೊಡುವುದು ಇಲ್ಲಿಯ ಭಾರತೀಯ ಮೂಲದವರು ವಿವಿಧ ಆಕರಗಳಿಂದ ಹಣ ಸಂಗ್ರಹಿಸಿ, ಭಾರತದ ಹಲವಾರು ಕ್ಷೇತ್ರಗಳಲ್ಲಿ ಸಹಾಯ ಮಾಡಿ, ಅಭಿವೃದ್ಧಿಯ ಪಥಕ್ಕೆ ಕರೆದೊಯ್ಯುತ್ತಿರುವುದು. ಹಾಗಾಗಿ, ಸ್ನೇಹಿತರೆ ನಾವು ಉದ್ಯೋಗ ಅರಸಿಕೊಂಡು, ವಿಮಾನ ಏರಿಕೊಂಡು ಪರದೇಶಕ್ಕೆ ಬಂದಿರಬಹುದು. ಆದರೆ, ನಮ್ಮ ತನವನ್ನು ಬಿಟ್ಟಿಲ್ಲ. ಬಿಡುವುದೂ ಇಲ್ಲ.

ನಮ್ಮ ಕೋಲಾಟದ ತರಹ ಉತ್ತರ ಭಾರತೀಯ ನೃತ್ಯ ನಡೆಯಿತು. ಇಲ್ಲಿ ಮಹಾ ಪ್ರಸಾದವೆಂದರೆ, ಭಕ್ತರೇ ಮನೆಯಿಂದ ತಯಾರಿಸಿಕೊಂಡು ಬರುವ ಖಾದ್ಯ / ತಿನಿಸುಗಳು. ಅದು ಯಾವುದೇ ಸಸ್ಯಾಹಾರದ ಪದಾರ್ಥವಿರಬಹುದು. ಅದನ್ನೆಲ್ಲಾ ದೇವಸ್ಥಾನದಲ್ಲಿ ಹಂಚಿಕೊಂಡು ತಿನ್ನುವಾಗ ನಿಜಕ್ಕೂ ಅದಕ್ಕೇ ಬೇರೆಯೇ ರುಚಿ ಬರುತ್ತದೆ. ಬೇರೆಯೇ ಅರ್ಥ ಬರುತ್ತದೆ. ಪ್ರತಿದಿನವೂ ಏನೆಲ್ಲ ಕಾರ್ಯಕ್ರಮ ಇರುತ್ತದೆ. ಅದಕ್ಕೆ ನೀವು ಹೇಗೆ ತಯಾರಿ ನಡೆಸಬಹುದು. ಏನು ಕಾಣಿಕೆ ಕೊಡಬಹುದು ಎಂದು ಇ–ಮೇಲ್ ಮೂಲಕ ತಿಳಿಸಲಾಗುತ್ತಿತ್ತು. ಹೀಗೆ ಒಂಭತ್ತು ದಿನವೂ ಯಶಸ್ವಿಯಾಗಿ ನಡೆದಿದ್ದು ಈ ಮಂಡಳಿಯ ಭಕ್ತಿ ಮಹಾಶಯರಿಂದಾಗಿ. ಇದಕ್ಕೆಲ್ಲ ಮೂಲ ರೂವಾರಿ ನಮ್ಮ ನಂಜನಗೂಡಿನ ಹತ್ತಿರವಿರುವ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು. ಅವರ ಅಣತಿಯಂತೆ ಇಲ್ಲಿ ನಡೆಯುತ್ತಿರುವ ಅದ್ಭುತ ಕೆಲಸ. ಹೊಸ ದೇವಾಲಯದ ನಿರ್ಮಾಣ. ಇನ್ನೊಂದು ಮೂರು ವರ್ಷದಲ್ಲಿ ಟೆಕ್ಸಾಸ್‌ನ ಪ್ರಮುಖ ಹಿಂದೂ ಆಕರ್ಷಣಾ ಕೇಂದ್ರವಾಗಲಿದೆ. ಹೆಚ್ಚಿನ ವಿವರಗಳಿಗೆ ವೆಬ್ ಸೈಟ್ ನೋಡಿ. (http://www.dallashanuman.org/)

**2) ದೀಪಾವಳಿ ಮೇಳ:** ದೀಪಾವಳಿ ಒಂದು ವಾರವಿರುವಾಗ ಶನಿವಾರದ ದಿನ ಡಲ್ಲಾಸ್‌ನ 'ಕೌ ಬಾಯ್' ಸ್ಟೇಡಿಯಮ್‌ನ ಒಳಗೆ ಹೊರಗೆ ಜಾತ್ರೆಯ ಸಡಗರ. ಎಲ್ಲೆಲ್ಲಿಯೂ ಭಾರತದ (ಮೂಲದ) ಜನ. ಎಷ್ಟು? ಸುಮಾರು ಐವತ್ತು ಸಾವಿರ! ಕಳೆದ ವರ್ಷವೂ ಇದೆ ರೀತಿ ಸುಮಾರು 40 ಸಾವಿರ ಜನ ಸೇರಿದ್ದರು. ಇಲ್ಲಿ ಎಲ್ಲ ಭಾಷೆಯ ಭಾರತೀಯರು, ನೇಪಾಳದವರು, ಪಾಕಿಸ್ತಾನದವರು ಮತ್ತು ಇಲ್ಲಿಯ ನಾಗರಿಕರು. ಮಧ್ಯಾಹ್ನ ಸುಮಾರು 2 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ನಮ್ಮಲ್ಲಿಯ ಜಾತ್ರೆಯ ತರಹವೇ ವಿವಿಧ ಮನರಂಜನೆಗಳಲ್ಲಿ ಭಾಗವಹಿಸಿ ನಲಿದಾಡಿದರು. ಈ ವರ್ಷ ಭಾರತೀಯ ಮೂಲದ ಲೂಸಿಯಾನ ಗವರ್ನರ್ ಬಾಬಿ ಜಿಂದಾಲ್ ಬಂದಿದ್ದು ವಿಶೇಷ. ಅವತ್ತು ಎಲ್ಲೆಲ್ಲೂ ಭಾರತೀಯ ವಾತಾವರಣ. ಚಿಣ್ಣರಿಗಾಗಿ ಹಲವು ಆಟದ ಅಂಕಣಗಳು, ಹಲವು ಸಂಸ್ಥೆಗಳ ಪ್ರಚಾರದ ಟೆಂಟ್‌ಗಳು, ತಿಂಡಿತಿನಿಸುಗಳ (ಬಜ್ಜಿ–ಬೋಂಡ) ಅಂಗಡಿಗಳು, ಹಲವು ಧಾರ್ಮಿಕ / ಯೋಗ ಕಾರ್ಯಕ್ರಮಗಳ ಸವಿವರ ನೀಡುತ್ತಿರುವ ಉತ್ಸಾಹಿ ಯುವಕರು, ಮುಕ್ತ ನೃತ್ಯ ವೇದಿಕೆಗಳು. ಎಲ್ಲಾ ತರಹದ ಅಭಿರುಚಿಗಳಿಗೆ ತಕ್ಕಂತೆ ಸೌಲಭ್ಯಗಳು. ಇಲ್ಲಿಯ (ಬಿಳಿ) ನಾಗರಿಕರೂ ಕೂಡ ನಮ್ಮೊಂದಿಗೆ ಬೆರೆತು ಸಂತೋಷಿಸಿದರು.

ಸುಮಾರು 65 ಸಾವಿರ ಆಸನಗಳ ಸಾಮರ್ಥ್ಯವಿರುವ ಈ ಒಳಾಂಗಣ ಕ್ರೀಡಾಂಗಣದಲ್ಲಿ ಅವತ್ತು ನಡೆದಿದ್ದು ಇಲ್ಲಿಯ ಮಕ್ಕಳಿಂದ ಭರತ ನಾಟ್ಯ, ಭಾಂಗ್ರ ನೃತ್ಯ ಮತ್ತು ಭಾರತದಿಂದ ಕರೆಸಿದ (ಸುಮಾರು ಇನ್ನೂರಕ್ಕೂ ಹೆಚ್ಚು ಕಲಾವಿದರ ತಂಡ) ತಂಡದಿಂದ ರಾಮಲೀಲಾ ನಾಟಕ ಪ್ರದರ್ಶನ. ಪ್ರತೀ ವರ್ಷವೂ ಭಾರತದಿಂದ ಹಲವು ಪ್ರಸಿದ್ಧ ಕಲಾವಿದರನ್ನು ಕರೆಸುತ್ತಾರೆ. ಹಾಡು, ಭಜನೆ, ಭಾಷಣ ಮುಂತಾದ ಒಳಾಂಗಣ ಕಾರ್ಯಕ್ರಮಗಳು ಮುಗಿದಿದ್ದು ಹನ್ನೊಂದು ಗಂಟೆಯ ಮೇಲಾಗಿದೆ. ನಂತರ ಸುಮಾರು (ರಾತ್ರಿ) ಹನ್ನೆರಡು ಗಂಟೆಗೆ ಹತ್ತು ತಲೆಯ ಬೃಹದಾಕಾರದ ರಾವಣ ಪ್ರತಿಕೃತಿ ದಹನ ಮತ್ತು ಪಟಾಕಿ ಪ್ರದರ್ಶನ. ಎಲ್ಲವೂ ಅತ್ಯಂತ ಸುರಕ್ಷತೆಯಿಂದ ಹನ್ನೆರಡೂವರೆಗೆ ಜನರ ಹರ್ಷೋದ್ಗಾರದಿಂದ ಮುಕ್ತಾಯ.ಈ ಕಾರ್ಯಕ್ರಮದ ಮುಖ್ಯ ಸಂಚಾಲಕ, ದೀಪಾವಳಿ ಮೇಳದ ಅಧ್ಯಕ್ಷ ಸತೀಶ್ ಗುಪ್ತ. ಈ ಪರಂಪರೆಯನ್ನು ಹುಟ್ಟುಹಾಕಿ ಬೆಳೆಸುತ್ತಿರುವ ಇವರ ಬಗ್ಗೆ ನಾವು ಹೆಮ್ಮೆ ಪಡಬೇಕು. ವಿವರಗಳನ್ನು ವೆಬ್ ಸೈಟ್‌ನಲ್ಲಿ ನೋಡಿ. (http://www/dfwdiwalimela.com/defaulthome.html)

**3) ದೀಪಾವಳಿಯ ದಿನದ ಯಜ್ಞ:** ನಿಮಗೆ ಆಶ್ಚರ್ಯವಾಗಬಹುದು. ಅಮೆರಿಕದಂಥ ಕ್ರಿಶ್ಚಿಯನ್ನರೆ ಜಾಸ್ತಿ ಇರುವ ದೇಶದಲ್ಲಿ ಒಂದು ಅತೀ ಮುಂದುವರೆದ ನಗರದ ಮಧ್ಯ ಭಾಗದಲ್ಲಿ ಒಂದು ಮಹಾ ಯಜ್ಞ! ಬೆಂಗಳೂರಿನ 'ಆರ್ಟ್ ಆಫ್ ಲಿವಿಂಗ್'ನ ಶ್ರೀ ರವಿಶಂಕರ್ ಗುರೂಜಿ ಅವರ ನೇತೃತ್ವ / ಆಶೀರ್ವಾದದೊಂದಿಗೆ ಸುಮಾರು ಐದು ಸಾವಿರ ಭಕ್ತ ಸಮ್ಮುಖದಲ್ಲಿ ಡಲ್ಲಾಸ್‌ನ ಕನ್ವೆನ್ಶನ್ ಸೆಂಟರ್ನಲ್ಲಿ ನಡೆದ ಯಜ್ಞ ನಿಜಕ್ಕೂ ಒಂದು ದಾಖಲೆ. ಎಲ್ಲಾ ಸಮುದಾಯದವರ ಗೌರವ ಹೊಂದಿರುವ ಶ್ರೀ ಗುರೂಜಿಯವರು ಇದೇ ಕಳೆದ ದೀಪಾವಳಿಯ ಶುಭ ದಿನದಲ್ಲಿ ಅಂಥದ್ದೊಂದು ಸಂಕಲ್ಪವನ್ನು ಸಾಕಾರಗೊಳಿಸಿದರು.ಮಾಹಿತಿಯನ್ನು ಈ ವೆಬ್‌ಸೈಟ್‌ನಿಂದ ಪಡೆಯಿರಿ. (http:/www.artoflivingdfw.org/sundarindia/diwaliyagna_main.htm)



ಚೈತ್ರರಶ್ಮಿ ಮಾರ್ಚ್, ಏಪ್ರಿಲ್-2009

ಕಥಾ ರಶ್ಮಿ

# ನಿರ್ಧಾರ

- ಕಿಗ್ಗಾಲು ಎಸ್ ಗಿರೀಶ್, ಮೂರ್ನಾಡು, ಕೊಡಗು



ಬೆಳಗಿನ ಜಾವ ಪಿಟಿಪಿಟಿ ಎಂದು ಶುರುವಾದ ಮಳೆ ಸಂಜೆಯಾದರೂ ನಿಲ್ಲುವ ಸೂಚನೆ ತೋರಿಸಿರಲಿಲ್ಲ.ರಂಗೇಗೌಡರು ಚಾವಡಿಯ ಉದ್ದಗಲಕ್ಕೂ ಶಥಪಥ ಹಾಕುತ್ತಾ "ಈ ಮಳೆ ಹೀಗೇ ಮುಂದುವರಿದರೆ ಪಾದಪೂಜೆಗೆಂದು ಮಠದಿಂದ ಬರುವ ಸ್ವಾಮಿಗಳ ಸ್ವಾಗತಕ್ಕೆ ಸಿದ್ಧತೆಯನ್ನು ಮಾಡುವುದಾದರೂ ಹೇಗೆ" ಎಂದು ಚಿಂತಿಸತೊಡಗಿದರು. ಸ್ವಾಮಿಗಳಿಗೆ ನಡೆಸಿಕೊಡುವ ಪಾದಪೂಜೆಯ ವೈಭವ ಮತ್ತು ಗದ್ದಲವು ಅವರ ಪ್ರತಿಷ್ಟೆಯ ಸಂಕೇತವೂ ಆಗಿತ್ತು. ಆದರೆ ಮಳೆಯು ಹೀಗೆ ಮುಂದುವರಿದರೆ ನಡೆಸಬೇಕಾದ ಕಾರ್ಯಕ್ರಮವು ಎಲ್ಲಿ ಸಪ್ಪೆಯಾಗಿಬಿಡುತ್ತದೋ ಎಂಬ ಅಂಜಿಕೆಯೂ ಅವರನ್ನು ಕಾಡತೊಡಗಿತು. ಆಗ, ಮನೆಯ ಅಂಗಳಕ್ಕೆ ಒತ್ತಾಗಿಕೊಂಡಿದ್ದ ಅಡಕೆ ತೋಟದ ಸಂಕವನ್ನು ದಾಟಿ ಕೂಲಿಕೆಲಸದ ಸುಬ್ಬಮ್ಮ ಆತಂಕದ ಛಾಯೆಯಿಂದ ಬರುತ್ತಿರುವುದು ರಂಗೇಗೌಡರಿಗೆ ಕಾಣಿಸಿತು.

"ಏನು ಸುಬ್ಬಮ್ಮ, ನೀನಿಲ್ಲಿಗೆ ಬಾರದೆ ಬಹಳ ಸಮಯವಾಯಿತಲ್ಲ? ಇಲ್ಲಿ ಬಹಳಷ್ಟು ಕೆಲಸಗಳು ಮಾಡಲಿಕ್ಕಿದೆ. ಸ್ವಾಮಿಗಳ ಪಾದಪೂಜೆ ಆಗುವವರೆಗೂ ನೀನಿಲ್ಲಿ ಕೆಲಸ ಮಾಡಿಕೊಂಡಿರು. ಹೇಳಿದ್ದು ಕೇಳಿಸಿತೆ?" ರಂಗೇಗೌಡರು ಹೇಳಿದರು.

"ಧಣಿಗಳೆ, ಇನ್ನೆರೆಡು ತಿಂಗಳು ಬೇಕಿದ್ದರೂ ಇಲ್ಲೇ ಕೆಲಸ ಮಾಡುತೇನೆ. ಆದರೆ ವಿಷಯ ಅದಲ್ಲ.ನನ್ನ ಮಗ ಆನಂದನನ್ನು ಪೊಲಿಸರು ಮೊನ್ನೆಯೇ ಹಿಡಕೊಂಡು ಹೋದವರು ಇನ್ನೂ ಬಿಟ್ಟಿಲ್ಲ. ಮಠದ ಕಾರ್ಯಕರ್ತರ ಮನೆಯಲ್ಲಿ ಬೆಳ್ಳಿ ದೀಪ ಕಳವು ಮಾಡಿದ ಅಂತ ಕಾರ್ಯಕರ್ತ ದೇವಣ್ಣ ಪೋಲಿಸ್ ದೂರು ಕೊಟ್ಟಿದ್ದಾನೆ. ನನ್ನ ಮಗ ಖಂಡಿತ ಹಾಗೆ ಮಾಡಿಲ್ಲ. ನೀವೇ ಹೇಗಾದರೂ ಮಾಡಿ ಅವನನ್ನು ಬಿಡಿಸಿಕೊಂಡು ಬರಬೇಕು" ಗೋಳೋ ಎಂದು ಅಳುತ್ತಾ ಸುಬ್ಬಮ್ಮ ಗೌಡರ ಪಾದವನ್ನು ಹಿಡಿದು ಕೇಳಿಕೊಳ್ಳತೊಡಗಿದಳು.

ರಂಗೇಗೌಡರಿಗೆ ಈಗ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಂತೆ ಎನಿಸಿತು. ಸ್ವಾಮಿಗಳ ಪಾದಪೂಜೆಗೇ ತನ್ನಲ್ಲಿ ಸಮಯವಿಲ್ಲ, ಇನ್ನು ಸುಬ್ಬಮ್ಮನ ಮಗ ಆನಂದನನ್ನು ಬಿಡಿಸಿಕೊಂಡು ಬರಲು ಕೋರ್ಟು ಕಛೇರಿಗೆ ಅಲೆದಾಡುವ ವ್ಯವಧಾನವಾದರೂ ತನಗೆಲ್ಲಿದೆ? ಅಲ್ಲದೆ ಸುಬ್ಬಮ್ಮನಿಗೆ ತನ್ನ ಮಗ ಆನಂದನ ತಂದೆ ಯಾರೆಂದು ಸಹ ಗೊತ್ತಿಲ್ಲ.ಈ ಹಿಂದೆ ಸುಬ್ಬಮ್ಮ ಇದೇ ಮಠದಲ್ಲಿ ಕೂಲಿಕೆಲಸ ಮಾಡಿಕೊಂಡಿದ್ದಾಗ ಹುಟ್ಟಿದವ ಈ ಆನಂದ. ಅವಿವಾಹಿತ ತಾಯಿ ಎಂಬ ಹಣೆಪಟ್ಟಿ ಕಟ್ಟಿಕೊಂಡು ಮಠದಿಂದಲೇ ಬಹಿಷ್ಕರಿಸಲ್ಪಟ್ಟ ಈ ಸುಬ್ಬಮ್ಮ ಅನಂತರದ ದಿನಗಳಲ್ಲಿ ಸುತ್ತಮುತ್ತಲಿನ ಅಡಕೇತೋಟಗಳಲ್ಲಿ ಹೇಗೋ ಕೂಲಿನಾಲಿ ಮಾಡಿಕೊಂಡು ಮಗ ಆನಂದನೊಂದಿಗೆ ಜೀವನ ನಡೆಸುತ್ತಿದ್ದಳು.ಈಗ ಮಗನೂ ಮಠದ ಕಾರ್ಯಕರ್ತರ ಮನೆಯಲ್ಲಿ ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡು ಜೈಲಿಗೆ ಹೋಗಿದ್ದಾನೆ. ಇಂತಹವನಿಗೆ ಜಾಮೀನು ನಿಂತದ್ದು ಸ್ವಾಮಿಗಳಿಗೆ ಗೊತ್ತಾದರೆ ಅವರು ತನ್ನಿಂದ ಪಾದಪೂಜೆ ಮಾಡಿಸಿಕೊಳ್ಳಲೂ ಹಿಂಜರಿಯಬಹುದು. ಅಡಕೆಯ ಕುಸಿತದ ಧಾರಣೆ ಇದ್ದರೂ ಹೇಗೋ ಹಣ ಹೊಂದಿಸಿಕೊಂಡು ಈಗ ಸ್ವಾಮಿಗಳ ಆಗಮನದ ಪ್ರತೀಕ್ಷೆಯಲ್ಲಿದ್ದು ಅವರಿಂದ ಆಶೀರ್ವಚನ ಪಡೆದು ಸಮಾಜದಲ್ಲಿ ತನ್ನ ಸ್ಥಾನಮಾನಗಳನ್ನು ಗಟ್ಟಿ ಮಾಡಿಕೊಳ್ಳಬೇಕೆಂದಿರುವಾಗಲೇ ಸುಬ್ಬಮ್ಮ ತನ್ನ ಅಳಲನ್ನು ತನ್ನಲ್ಲಿ ತೋಡಿಕೊಳ್ಳುತ್ತಿದ್ದಾಳೆ. ಒಳ್ಳೆಯ ಪೀಕಲಾಟಕ್ಕೆ ಬಂತಲ್ಲ ಎಂದು ರಂಗೇಗೌಡರು ಯೋಚಿಸತೊಡಗಿದರು.

"ನೋಡು ಸುಬ್ಬಮ್ಮ, ಯಾವುದಕ್ಕೂ ಪಾದಪೂಜೆಯೊಂದು ಕಳೆದುಹೋಗಲಿ. ಆಮೇಲೆ ನಿನ್ನ ಮಗನ ಬಗ್ಗೆ ವಿಚಾರಿಸೋಣ, ಈಗ ಹಿತ್ತಲಿಗೆ ಹೋಗಿ ಕೆಲಸ ಮಾಡು"

ಸುಬ್ಬಮ್ಮನನ್ನು ಹಿತ್ತಲಿಗೆ ಸಾಗಹಾಕಿದರಾದರೂ ಅನಂತರ ಗೌಡರ ಮನಸ್ಸಿನಲ್ಲಿ ಆನಂದನ ವಿಚಾರವೇ ಕೊರೆಯತೊಡಗಿತು. ಈ ಹಿಂದೆ ಸುಬ್ಬಮ್ಮ ತನ್ನ ತೋಟದಲ್ಲಿ ಕೆಲಸಕ್ಕೆ ಬರುತ್ತಿದ್ದಾಗ ಆನಂದನನ್ನೂ

**ಕಥಾರಶ್ಮಿ**



ಸುಬ್ಬಮ್ಮ ತನ್ನೊಂದಿಗೆ ಕರೆತರುತ್ತಿದ್ದಳು. ಬಿದ್ದ ಅಡಕೆಯನ್ನು ಹೆಕ್ಕಿ ತಾಯಿಗೆ ಸಹಾಯಮಾಡುತ್ತಿದ್ದ ಹುಡುಗ ಆನಂದ ಎಂದೂ ಕಳ್ಳತನಕ್ಕಿಳಿಯುವಷ್ಟು ಕೆಳಮಟ್ಟಕ್ಕಿಳಿಯಲಾರ ಎಂದವರ ಒಳಮನಸ್ಸು ಹೇಳುತ್ತಿತ್ತು. ಆದರೂ ಮಠದಿಂದಲೇ ಪೋಲಿಸ್ ಪುಕಾರು ಹೋದಮೇಲೆ ತಾನಾದರೂ ಏನು ಮಾಡಲು ಸಾಧ್ಯ? ಹೇಗಿದ್ದರೂ ವಕೀಲ ಉತ್ತಪ್ಪನವರನ್ನು ಕಂಡು ಆನಂದನ ಜಾಮೀನಿನ ಬಗ್ಗೆ ವಿಚಾರಿಸಬೇಕೆಂದುಕೊಂಡರು.

ವಕೀಲ ಉತ್ತಪ್ಪನವರ ಕಛೇರಿಗೆ ಗೌಡರು ಹೆಜ್ಜೆ ಇಟ್ಟಾಗ ಸಮಯ ಬೆಳಗ್ಗೆ ಹನ್ನೊಂದಾಗಿತ್ತು. "ಉತ್ತಪ್ಪನವರೇ, ಆ ಹುಡುಗ ಆನಂದನಿಗೆ ಜಾಮೀನು ಕೊಡಿಸಬೇಕಿತ್ತಲ್ಲ, ಅವನಮ್ಮ ತೀರಾ ಕಂಗಾಲಾಗಿದ್ದಾಳೆ. ಅವಳ ಬಳಿ ಜಾಮೀನಿಗೆ ಅಷ್ಟೊಂದು ಹಣವಿರಲಿಕ್ಕಿಲ್ಲ. ಈಗೇನು ಮಾಡಬಹುದು?" ರಂಗೇಗೌಡರು ವಕೀಲ ಉತ್ತಪ್ಪನವರ ಸಲಹೆ ಕೇಳಿದರು.ಆಗ ಉತ್ತಪ್ಪನವರು" ಗೌಡರೇ, ಕೇಸು ಹಳೆಯದಾದಷ್ಟು ಜಾಮೀನು ಕೊಡಿಸುವುದು ಕಷ್ಟ. ಸುಮಾರು ನಲವತ್ತು ಸಾವಿರ ರೂಪಾಯಿಗಳ ಖಾತ್ರಿ ಜಾಮೀನು ಬೇಕಾಗಬಹುದು. ಆದಷ್ಟು ಬೇಗ ಹಣ ಹೊಂದಿಸಿಕೊಂಡು ಬನ್ನಿ. ನಾನು ಬೇಕಾದ ಕಾಗದ ಪತ್ರಗಳನ್ನು ಸಿದ್ಧಗೊಳಿಸುತ್ತೇನೆ".

ಗೌಡರು ಈಗ ತೀರ ಹತಾಶರಾದರು. ತಾವು ಸ್ವಾಮಿಗಳ ಪಾದಪೂಜೆಗೇ ಹಣ ಹೊಂದಿಸಿಕೊಳ್ಳುವುದು ಕಷ್ಟಸಾಧ್ಯವಾಗಿರುವಾಗ ಇನ್ನು ಆನಂದನ ಜಾಮೀನಿಗೆ ಹಣವೆಲ್ಲಿಂದ ತರಲಿ? ಅನಾಥೋ ದೈವರಕ್ಷಕ ಎಂದು ಸುಮ್ಮನಿರಬೇಕಷ್ಟೆ. ಬೇರೆ ಮೂಲಗಳಿಂದ ಆರ್ಥಿಕ ಸಹಾಯ ಪಡೆಯುವ ಎಂದರೆ ಸ್ವಾಮಿಗಳ ಹಾಗೂ ಕಾರ್ಯಕರ್ತರ ಅವಗಣನೆಗೆ ತುತ್ತಾದ ಸುಬ್ಬಮ್ಮನಿಗೆ ಮಠದ ವಿಶ್ವಾಸಕ್ಕೆ ವಿರುದ್ಧವಾಗಿ ಧನಸಹಾಯ ಮಾಡುವ ಎದೆಗಾರಿಕೆಯಾದರೂ ಯಾರಿಗೆ ಇದೆ? ಕಛೇರಿಯಿಂದ ಮರಳಿದ ಗೌಡರಿಗೆ ತಳಮಳದ ತೀವ್ರತೆಯಿಂದಾಗಿ ರಾತ್ರಿಯ ನಿದ್ರೆಗೂ ಅಡಚಣೆಯಾದಂತೆನಿಸಿತು.

ಇದಾದ ಕೆಲವು ದಿವಸಗಳ ಅನಂತರ ಅದೊಂದು ಮುಂಜಾನೆ ಮಠದ ಕಾರ್ಯಕರ್ತ ದೇವಣ್ಣ ರಂಗೇಗೌಡರ ಮನೆಗೆ ಬಂದು"ಗೌಡರೇ, ಪಾದಪೂಜೆಯ ಪೂರ್ವ ಸಿದ್ಧತೆಗೆಂದು ನೀವು ಮಠಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅಲ್ಲದೆ ಸ್ವಾಮಿಗಳ ಲೋಕಕಲ್ಯಾಣ ನಿಧಿ ಯೋಜನೆಯಡಿ ಹತ್ತು ಸಾವಿರ ವಂತಿಗೆಯನ್ನೂ ನೀಡಬೇಕಾಗುತ್ತದೆ. ನಿಮ್ಮಿಂದ ಚಂಡಿಕಾ ಯಜ್ಞವನ್ನೂ ಸ್ವಾಮಿಗಳು ಅಪೇಕ್ಷಿಸುತ್ತಾರೆ. ಒಟ್ಟಿನಲ್ಲಿ ನಿಮ್ಮ ಹೆಸರನ್ನು ಮಠದಲ್ಲಿ ಕೆತ್ತಿಸಬೇಕೆಂದು ಸ್ವಾಮಿಗಳ ಅಪ್ಪಣೆಯಾಗಿದೆ." ಎಂದಾಗ ಗೌಡರಿಗೆ ಗೋಟಿನಲ್ಲಿ ಸಿಕ್ಕಿಕೊಂಡ ಕತ್ತರಿಯಾದಂತಾಯಿತು.

ಗೌಡರು ಹಣದ ಸಿದ್ಧತೆ ಮಾಡಿಕೊಳ್ಳುತ್ತಿದ್ದಂತೆ ಮಠದಿಂದಲೇ ಗೌಡರಿಗೆ ತುರ್ತಾಗಿ ಕರೆ ಬಂತು. ಏಕಾಂತದಲ್ಲಿ ಮಠಾಧೀಶರು ಗೌಡರನ್ನು ಸಂಪರ್ಕಿಸಿ "ಅದೇನೋ ಆ ಸುಬ್ಬಮ್ಮನಿಗೆ ನೀವು ಜಾಮೀನಿನ ವ್ಯವಸ್ಥೆಯನ್ನು ಮಾಡುತ್ತಿದ್ದೀರೆಂದು ವರ್ತಮಾನ ಬಂತು. ಇದು ನಿಜವಾಗಿದ್ದಲ್ಲಿ ನಿಮ್ಮಿಂದ ನಾವು ಪಾದಪೂಜೆ ಮಾಡಿಸಿಕೊಳ್ಳುವ ಬಗ್ಗೆ ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ಆ ಹಾದರಗಿತ್ತಿಯ ಕಳ್ಳಮಗನಿಗೆ ಮಠದಿಂದಲೇ ಅವಕೃಪೆಯಾಗಿರುವಾಗ ನೀವು ಹೀಗೆ ಮಾಡುವುದು ಸರಿಯಲ್ಲ. ನಿಮ್ಮ ಪ್ರತಿಷ್ಠೆಯನ್ನು ಮೆರೆಸಲು ನಿಮ್ಮ ಹೆಸರನ್ನು ಮಠದಲ್ಲಿ ಕೆತ್ತಿಸಲಾಗುವುದು. ನೀವು ಆದಷ್ಟು ಬೇಗ ಹಣ ನೀಡಿ ಮಠದ ಘನತೆಯನ್ನು ಹೆಚ್ಚಿಸಿಕೊಡಿ".

ಮನೆಗೆ ಮರಳಿದ ಗೌಡರು ಈಗ ತೀವ್ರ ಗೊಂದಲದಲ್ಲಿ ಬಿದ್ದರು. ಲೋಕ ಕಲ್ಯಾಣಕ್ಕಾಗಿ ನಡೆಸುವ ಯಜ್ಞದಲ್ಲಿ ತಾನೂ ವಂತಿಗೆ ನೀಡಿ ಪಾಲ್ಗೊಳ್ಳಬೇಕೆ? ಮಠದ ಕಟ್ಟಡದಲ್ಲಿ ತನ್ನ ಹೆಸರೂ ಅಜರಾಮರವಾಗಬೇಕೆ? ಇದರಿಂದ ಏನನ್ನು ಸಾಧಿಸಿದಂತಾದೀತು? ಈ ಹಿಂದೆ ಮಠಕ್ಕಾಗಿ ತನ್ನೆಲ್ಲವನ್ನೂ ಕಳೆದುಕೊಂಡ ಸುಬ್ಬಮ್ಮನನ್ನು ಆ ಮಠವೇ ತಿರಸ್ಕರಿಸಿದ್ದು ಸರಿಯೆ? ಮಠದಲ್ಲಿ ಜನಿಸಿದ ಶಿಶು ಆನಂದನನ್ನು ಮಠವೇ ಸ್ವೀಕರಿಸುವ ಬದಲು ಕಳ್ಳತನದ ಆಪಾದನೆ ಹೊರಿಸಿ ಜೈಲಿಗೆ ತಳ್ಳಿದ್ದು ಸಮಂಜಸವೆ? ತನ್ನಿಂದ ಆನಂದನನ್ನು ಕನಿಷ್ಠ ರಕ್ಷಿಸುವ ಪ್ರಯತ್ನಕ್ಕೂ ಮಠವೇಕೆ ತಡೆಗೋಡೆ ಹಾಕುತ್ತಿದೆ? ಯಾವ ಪುರುಷಾರ್ಥಕ್ಕಾಗಿ ಇಂತಹ ಸ್ವಾಮಿಗಳ ಪಾದಪೂಜೆಗೆ ತಾನಿಳಿಯಬೇಕು?

ಬಹಳ ದೀರ್ಘ ಚಿಂತನೆ ನಡೆಸಿದ ರಂಗೇಗೌಡರು ಕೊನೆಗೊಂದು ನಿರ್ಧಾರಕ್ಕೆ ಬಂದರು. ಮಠಾಧಿಪತಿಗಳ ಪಾದಪೂಜೆಗೆಂದು ತಾವು ಬಹಳ ಜತನದಿಂದ ಕಾಯ್ದಿರಿಸಿದ್ದ ಹಣವನ್ನು ತೆಗೆದುಕೊಂಡು ಆನಂದನನ್ನು ಬಿಡಿಸಿಕೊಂಡುಬರಲು ಅವರು ವಕೀಲ ಉತ್ತಪ್ಪನವರ ಕಛೇರಿಗೆ ಧಾಪುಗಾಲು ಹಾಕಿದರು.





# ಟೆಕ್ಸಾಸ್‌ನಲ್ಲಿ ಭಕ್ತಿಸಾಗರ



**ಉದ್ಯೋಗ ನಿಮಿತ್ತ ವಿದೇಶಗಳಿಗೆ ಹೋಗುವವರ ಸಂಖ್ಯೆ ಸಾಕಷ್ಟು . ವಿದೇಶಕ್ಕೆ ಹೋದವರು ಇಲ್ಲಿನ ತಮ್ಮ ಮೂಲ ಧರ್ಮ ಸಂಸ್ಕೃತಿಗಳನ್ನು ಮರೆಯುತ್ತಾರೆ ಎಂಬ ಆರೋಪ ಹಳೆಯದು. ಆದರೆ ಅಮೇರಿಕಾದಲ್ಲಿರುವ ದೇವಾಲಯಗಳು ಹಾಗೂ ಅಲ್ಲಿನ ಆಚರಣೆಗಳ ಬಗ್ಗೆ ಕೇಳಿದಾಗ ಅಚ್ಚರಿಯಾಗದೇ ಇರದು. ಅಮೇರಿಕಾದ ಟೆಕ್ಸಾಸ್‌ನಲ್ಲಿರುವ ದೇವಾಲಯಗಳು, ಅವುಗಳ ಮಹತ್ವ, ವಿಶೇಷಗಳನ್ನು ಪರಿಚಯಿಸುತ್ತಿದ್ದಾರೆ ಪ್ರಸ್ತುತ ಉದ್ಯೋಗ ನಿಮಿತ್ತ ಟೆಕ್ಸಾಸ್‌ನಲ್ಲಿ ನೆಲೆಸಿರುವ ವೆಂಕಟೇಶ್ ದೊಡ್ಮನೆ. ಉದ್ಯೋಗ ಅರಸಿಕೊಂಡು, ವಿಮಾನ ಏರಿಕೊಂಡು ಪರದೇಶಕ್ಕೆ ಬಂದಿದ್ದರೂ ನಾವು ನಮ್ಮತನವನ್ನು ಬಿಟ್ಟಿಲ್ಲ, ಬಿಡುವುದೂ ಇಲ್ಲ ಎನ್ನುತ್ತಾರೆ ವೆಂಕಟೇಶ್.**

**ವೆಂಕಟೇಶ್ ದೊಡ್ಮನೆ, ಟೆಕ್ಸಾಸ್, ಅಮೇರಿಕ**

ಡಲ್ಲಾಸ್‌ನ (Dallas–ಡ್ಯಾಲಸ್, ಇಲ್ಲಿಯ ಜನರ ಉಚ್ಚಾರ) ಸುತ್ತಮುತ್ತ ಇರುವ ಇತರ ಉಪನಗರಗಳಲ್ಲಿ ಇರುವ ಭಾರತೀಯರ/ ಹಿಂದೂಗಳ ಸಂಖ್ಯೆ ಸುಮಾರು 50–60 ಸಾವಿರ. ತಮ್ಮ ಜೀವನ ರೂಪಿಸಿಕೊಳ್ಳಲು ಉದ್ಯೋಗ ಅರಸಿಕೊಂಡು ಹಲವು ದೇಶಗಳಿಂದ ಬಂದ ಸನಾತನ ಧರ್ಮೀಯರು ತಮ್ಮ ನಂಬಿಕೆ, ಧರ್ಮ, ನಿಯಮಗಳನ್ನು ಮುಂದುವರೆಸಿ ಕೊಂಡು ಬಂದಿರುವುದು ಮತ್ತು ಮುಂದಿನ ಜನಾಂಗಕ್ಕೆ ಕೊಡುತ್ತಿರುವ ಮಹತ್ತರ ಕಾಣಿಕೆಯನ್ನು ನೋಡಿದಾಗ ಕಣ್ಮನ ತುಂಬಿ ಬರುವುದು ಸಹಜ. ಈ ಉದ್ಯೋಗಾರ್ಥಿಗಳ ಜನ್ಮದಾತರು ಭೇಟಿಕೊಟ್ಟಾಗ, ಅಮೆರಿಕಾದಲ್ಲಿ ಈ ದೃಶ್ಯಾವಳಿಗಳನ್ನು ನೋಡಿದಾಗ ಅವರ ಕಣ್ಣಲ್ಲಿ ಆನಂದ ಭಾಷ್ಪ ಸುರಿದರೆ ಹೆಚ್ಚಲ್ಲ ಹಾಗೆಯೇ ನಮ್ಮವರ ಸಾಧನೆಗಳನ್ನು ದಾಖಲಿಸದಿದ್ದರೆ ನಮ್ಮವರು ಹೊರದೇಶಗಳಲ್ಲಿ ಏನು ಮಾಡುತ್ತಿದ್ದಾರೆ ಎಂಬುದು ಸ್ವದೇಶದಲ್ಲಿರುವವರಿಗೆ ಕಲ್ಪನೆಗೆ ಬರುವುದು ಕಷ್ಟ. ಅದಕ್ಕೇ ಇದರ ಬಗ್ಗೆ ನನ್ನದೊಂದು ಸಣ್ಣ ಪ್ರಯತ್ನ.

**1) ಹನುಮಾನ್ ದೇವಸ್ಥಾನದಲ್ಲಿ ನವರಾತ್ರಿ :** ಹನುಮಾನ್ ದೇವಸ್ಥಾನ ಅಂದಕೂಡಲೇ ನಿಮಗೆ ಭಾರತದಲ್ಲಿನ ಗೋಪುರದಿಂದ ಕೂಡಿದ, ದೊಡ್ಡ ಶಿಲೆಯ ಹನುಮನ ಮೂರ್ತಿ ಇರುವ ಆ ಸಾಂಪ್ರದಾಯಿಕ ಗುಡಿ ನೆನಪಾಗಬಹುದು. ಆ ತರಹದ ಸಾಂಪ್ರದಾಯಿಕ ಗುಡಿಗಳೂ ಅಮೆರಿಕದಲ್ಲಿ ಸಾಕಷ್ಟಿವೆ. ಆದರೆ ಇಲ್ಲಿ (ಈ ಜಾಗದಲ್ಲಿ) ಗುಡಿ ಇನ್ನೂ ನಿರ್ಮಾಣ ಆಗಿಲ್ಲ. ಇತ್ತೀಚೆಗಷ್ಟೇ 'ಫ್ರಿಸ್ಕೋ'ದ ಹೊರವಲಯದಲ್ಲಿ ಸುಮಾರು ಹತ್ತು ಎಕರೆ ಜಾಗ ಖರೀದಿಗೆ ತೆಗೆದುಕೊಂಡು ಒಂದು ಅಲ್ಲಿ ವಿಶಾಲವಾದ ಒಂದು ವೇರ್ ಹೌಸ್ (ಉಗ್ರಾಣ–ಪ್ರಾರಂಭದಲ್ಲಿ ಅಮೆರಿಕದಲ್ಲಿ ಇದು ಸಾಮಾನ್ಯ) ಟ್ರಿನಿದಾದ್‌ನಿಂದ ತರಿಸಿದ ಸುಂದರ ಹನುಮಾನ್ ಮೂರ್ತಿಯನ್ನು ಸುಮಾರು ಆರೇಳು ತಿಂಗಳ ಹಿಂದೆ ಪ್ರತಿಷ್ಠಾಪಿಸಿ, ನವರಾತ್ರಿಯನ್ನು ಸಂಭ್ರಮದಿಂದ ಆಚರಿಸಲಾಯಿತು. ಪ್ರತಿದಿನ ಆ ದಿನದ ಮಹತ್ವಕ್ಕನುಗುಣವಾಗಿ ಸಾಂಪ್ರದಾಯಿಕ ಪೂಜೆ ವಿಧಿ ವಿಧಾನಗಳು, ಆರತಿ, ಪ್ರಸಾದ ನಂತರ ಎಲ್ಲರೂ ಭಾಗವಹಿಸಬಹುದಾದಂಥ,

ಕನಸು, ಆಕಾಂಕ್ಷೆ ಯಾವುದೂ ತನ್ನಷ್ಟಕ್ಕೆ ತಾವೇ ಕೈಗೊಡುವುದಿಲ್ಲ. ಅವುಗಳನ್ನು ವಾಸ್ತವಕ್ಕಿಳಿಸಲು ನಮ್ಮ ಪ್ರಯತ್ನವೇ ಏಕೈಕ ಮಾರ್ಗ. ನಾವು ಹೊಂದಿರುವ ಗುರಿಯತ್ತ ಸಾಗಲು ನಾವು ಮಾಡಿದ ಪ್ರಯತ್ನವೆಷ್ಟು? ಅಲ್ಪ ಜೀವಿತಾವಧಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಇಷ್ಟು ಪ್ರಯತ್ನ ಸಾಕೇ ? ಎಂಬ ಪ್ರಶ್ನೆಗಳನ್ನು ನಮ್ಮನ್ನು ನಾವೇ ಕೇಳಿಕೊಳ್ಳಬೇಕು. ಇದರಿಂದ ಸುಮ್ಮನೆ ಕಳೆದು ಹೋಗುವ ದಿನಗಳಿಗೆ ಒಂದು ಬಗೆಯ ತೀವ್ರತೆ ಬರುತ್ತದೆ.

ಅಂತರಾಷ್ಟ್ರೀಯ ಮನ್ನಣೆ ಗಳಿಸಿದ ತತ್ವಜ್ಞಾನಿ ವೈದ್ಯ ವಿಲಿಯಂ ಓಸ್ಲರ್ ಹೇಳುವಂತೆ "ನಾಳೆ ಎಂಬುದೇ ಇಲ್ಲ, ಈ ದಿನವೇ ಭವಿಷ್ಯದ ದಿನ!" ಒಟ್ಟಿನಲ್ಲಿ ನಿನ್ನೆಯನ್ನು ಹೇಗಾದರೂ ಕಳೆದಿರಲಿ. ಈ ಬಗ್ಗೆ ಹೆಮ್ಮೆ ಅಥವಾ ಖೇದ ಎರಡೂ ಬೇಡ. ಇಂದಿನ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸೋಣ. ಒಂದು ದಿನದಲ್ಲಿ ಅಂದುಕೊಂಡಿದ್ದೆಲ್ಲಾ, ಆಗದಿರಬಹುದು. ಆದರೆ, ಈ ದಿಸೆಯ ಸಾಧ್ಯತೆ ಹೆಚ್ಚೆ ಗುರುತಂತೂ ಅಂದು ಮಾಡಲೇ ಬೇಕು. ದಿನವೊಂದಕ್ಕೆ ನಿಗದಿ ಮಾಡಿಕೊಂಡ ಕರ್ತವ್ಯಗಳನ್ನು ನಿಯಮಿತವಾಗಿ ಮುಗಿಸುವ ಪ್ರಯತ್ನವನ್ನು ಶ್ರದ್ಧೆಯಿಂದ ಮಾಡುವುದು ಅಗತ್ಯ. ಬದುಕು ಸಾಧನೆ ಬಗ್ಗೆ ಇಂಥಾ ಶ್ರದ್ಧೆ ಇದ್ದಾಗಲೇ ಸಮಯ ಪೋಲಾಗುವುದು ನಿಲ್ಲುತ್ತದೆ. ವ್ಯಕ್ತಿಗತ ಬದುಕಿಗೆ ಅರ್ಥವೂ ಪ್ರಾಪ್ತವಾಗುತ್ತದೆ ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ. !




– ದತ್ತಗುರು ಕಂಠಿ,
ಅಧ್ಯಕ್ಷರು,
ಶಿರಸಿ ತಾಲೂಕಾ
ಚುಟುಕು ಸಾಹಿತ್ಯ
ಪರಿಷತ್

## ಓದುಗನ ಓಲೆ





ಪುಸ್ತಕ ಪರಿಚಯ

● ನವೀನ್ ಭಟ್, ಗಂಗೋತ್ರಿ.

# 'ಪ್ರತೀಕ್ಷೆ'

## ಒಂದು ಸಹಜ ಸುಂದರ ಕಾವ್ಯಗುಚ್ಛ




"ಈ ಕವಯಿತ್ರಿ ತನ್ನ ಸಂತೋಷಕ್ಕಾಗಿ ಹಾಡಿ ಕೊಳ್ಳುತ್ತಿದ್ದಾಳೆ. ಆದರೆ ಅದು ಅನ್ಯರು ಕೇಳುವಂತೆಯೇ ಇದೆ". ಈ ಮಾತು, 'ಪ್ರತೀಕ್ಷೆ' ಕವನ ಸಂಕಲನದ ಮುನ್ನುಡಿ ಬರೆಯುತ್ತ, ಶ್ರೀಯುತ ಡಾ॥ ಜಿ.ಎಲ್. ಹೆಗಡೆಯವರು ಹೇಳಿದ್ದು. ಕವಯಿತ್ರಿ ಕಮಲಾ ಕೊಂಡದಕುಳಿಯವರ 'ಪ್ರತೀಕ್ಷೆ'ಯನ್ನು ನಾನು ಕೂಡ ಕೇಳಿಸಿಕೊಂಡೆ. ಸುಮ್ಮನೇ ಓದಿಕೊಂಡರೂ, ಸ್ವತಃ ಕವಯಿತ್ರಿ ವಾಚಿಸುತ್ತಿರುವಂತಿವೆ ಕವಿತೆಗಳು. ಒಟ್ಟಾರೆ ಕವನ ಸಂಕಲನ ನನಗನ್ನಿಸಿದ್ದು ಹೀಗೆ...

ಕವಿಗೆ ಧ್ಯಾನಿಯಾಗುವುದು ಸುಲಭ. ಹಾಗೆಯೇ, ಕವಿಯ ಮಟ್ಟಿಗೆ ಈ ಬದುಕು ಅದೆಷ್ಟೇ ಸುಂದರವೆಂದರೂ, ಕೆಲವು ಸಹಜ ಸಹಜ ಮತ್ತು ವಿಕ್ಷಿಪ್ತ ಮುಖಗಳು, ಸುಮ್ನೇ 'ಇರುವೆ ಕಡಿತ'ದಂಥ ನೋವು ಕೊಡುತ್ತವೆ ಎಂಬುದೂ ಸತ್ಯ. ಕವಿತ್ವದ ಕಂಗಳಿಗೆ ಎಲ್ಲವೂ ಸ್ಪಷ್ಟ ಸ್ಪಷ್ಟ. ಕಲ್ಪಕ ಸಾಮ್ರಾಜ್ಯದ ಸ್ವರ್ಗದಲ್ಲಿ ವಿಹರಿಸುತ್ತ ಬದುಕಿ ಬಿಡುವೆನೆಂದರೂ, ವಾಸ್ತವವೆಂಬುದು ತುಂಬ ನಿಷ್ಠುರವಾಗಿ ಎಳೆಯುತ್ತದೆ. 'ಪ್ರತೀಕ್ಷೆ' ಕವಿತಾ ಗುಚ್ಛದ 'ವಾಸ್ತವ' ಕವಿತೆಯ ಜಾಡು ಇದೇ. ಅದೆಷ್ಟೇ ಸಹಜ ಶಬ್ದಗಳಲ್ಲಿ ಹೇಳಿಬಿಟ್ಟಿದ್ದರೂ, ಆ ಪದಗಳ ಹಿಂದಿನ ಆರ್ದ್ರಧ್ವನಿ ಮಾತ್ರ ಕೊನೆಯ ಸಾಲುಗಳ ಬಳಿ ಗದ್ಗದಿತವಾಗಿದೆ. 'ನಮ್ಮ ಬಾಳಿಗೆ ನಾವೇ ....ಗೋರಿ ತೋಡುತ್ತ ಸಾಗುತ್ತೇವೆ'! ಇದೇ ಹರಿವಿನ 'ಮರೀಚಿಕೆ' ಕವಿತೆಯ ಸಾಲುಗಳು ಮಾನವ ಬದುಕಿನ ಕೃತಕತೆಯನ್ನು ಸಮರ್ಥಿಸುತ್ತ (ನಾಟಕ ರಂಗವಲ್ಲವೇ ಬಾಳು / ಅಭಿನಯ ಅನಿವಾರ್ಯ). ಕೊನೆ ಕೊನೆಗೆ ಸಾಗಿದಂತೆ, ನಮ್ಮ ಅಳು – ನಗುವೆಂಬ ಭಾವಗಳನ್ನೇ ಮರೆತು ಯಂತ್ರಗಳಾಗುತ್ತಿರುವ ಧೂರ್ತತೆಯನ್ನು ಧ್ವನಿಸುತ್ತಿವೆ. ನಮ್ಮಿರವನ್ನೇ ಮರೆವ' ಆತ್ಮ ವಿಸ್ಮೃತಿಯ ಬಗ್ಗೆ ಲೇಖಕಿಯ ಕಳವಳ ಗಮನಾರ್ಹ.

'ಬದುಕಿನ ಸಂಗತಿಗಳನ್ನು ಇಷ್ಟು ಸಹಜವಾಗಿ, ನಿರ್ಲಿಪ್ತವಾಗಿ ಸ್ವೀಕರಿಸುವಾಗಲೂ, ಎಷ್ಟು ಚಂದದ ಕವಿತೆ ಹುಟ್ಟುತ್ತಲ್ಲವಾ!' ಎಂಬ ಉದ್ಗಾರ ಮೂಡಿಸುವಂತಿದೆ, 'ಹುಟ್ಟು–ಸಾವಿ'ನ ಕವಿತೆ. ಒಡಲ ಕುಡಿಯಂಥ ಕವಿತೆ ಸಾಲುಗಳು ಭೌತ ಬದುಕಿನ ಚಕ್ರಗಳಡಿಯಲ್ಲಿ ಸಾಯುವ ನೋವಿನ ಕವಿತೆ ಇದು. "ಎದೆಮಟ್ಟ ಬೆಳೆದ ಮಗ / ಧಿಕ್ಕರಿಸಿ ನಡೆವಾಗ / ಕಾರಂಜಿ ನದಿಯಾಗಿ ಕವನ / ಕೊಚ್ಚಿ ಹೋಗುವುದು....

**ಬರೀ ಸುಮ್ಮನೆ ಕಾವ್ಯ ಪ್ರಸವ ಸಂಭವಿಸದು,**
**ಕವಿತ್ವದ ಹಿಂದೆ ನಿಶ್ಚಿತವಾಗಿಯೂ ಹೊಯ್ದಾಟವಿರುತ್ತದೆ.**
**ಇಲ್ಲಿಯೂ ಅಂಥ ಸಹಜ ಹೊಯ್ದಾಟವಿದೆ.**
**'ಪ್ರತೀಕ್ಷೆ', ಮಾನವನ ಹತಾಶೆಯ, ನೈರ್ಲಿಪ್ತದ,**
**ಅಸಹಾಯ ಅನಿವಾರ್ಯ ವಾಸ್ತವದ ಕೋನಗಳಿಗೆ ಕನ್ನಡಿ**

*****

ವಾಸ್ತವ ಜೀವಿತದ ಇಷ್ಟಿಷ್ಟೇ ಚಿತ್ರಗಳು 'ಅಸಹಾಯಕತೆ' 'ಮರೀಚಿಕೆ' 'ಜೀವನ', 'ವೈಪರೀತ್ಯ' ಈ ಕವಿತೆಗಳಲ್ಲಿವೆ. ಈ ಎಲ್ಲ ಕವಿತೆಗಳಲ್ಲಿ, ಕವಯಿತ್ರಿಯ ಧ್ವನಿಯಲೆಂದೂ ಉದ್ವೇಗವಾಗಲೀ ಉತ್ಪ್ರೇಕ್ಷೆಯಾಗಲೀ ಇಲ್ಲ. ಆ ಎಲ್ಲ ಕವಿತೆಗಳಲ್ಲಿ ಮತ್ತೆ ಮತ್ತೆ ವಾಸ್ತವ ಚಿತ್ರಣದ ವಿವಿಧ ಮುಖಗಳು ವ್ಯಕ್ತವಾಗಿದ್ದರೂ ಸಹ, ಕ್ಲೀಷೆ ಎಂದೆನಿಸದೇ ಇರುವುದು ಅವುಗಳ ಸಹಜತೆಯಿಂದಾಗಿ ಸಹಜತೆ ಮಾತ್ರವೇ ಅವುಗಳ ಅನನ್ಯ ಶಕ್ತಿಯೂ ಹೌದು.

ಈ ನಡುವೆ, 'ಮೋಸ', 'ಮುಗ್ಧತೆ', 'ಕಾಳ್ಗಿಚ್ಚು' ಕವಿತೆಗಳಲ್ಲಿ ಗಾಢ ಮಾನವ ಬದುಕಿನಿಂದ ದೂರದ, ಸಾದಾ ಸಾಚಾ ಪ್ರಕೃತಿ ಜೀವ ಚಿತ್ರಣ ಮೂಡಿದೆ ಎಂದು ಮೇಲ್ನೋಟಕ್ಕೆ ಕಾಣಿಸಿದರೂ ಇಲ್ಲಿನ ಯಾವ ಕವಿತೆಯೂ ಮನುಷ್ಯನ ಮೂರ್ತಿ ಚಿತ್ರಣವನ್ನು ಬಿಟ್ಟು ದೂರ ಹೋಗಿಲ್ಲ. ಕವಯಿತ್ರಿ ಅದೆಷ್ಟೇ ಪ್ರಬಲವಾಗಿ ಮಾನವ ಬದುಕಿಗೆ ಹೊರತಾದ ಸಂಗತಿಯ ಚಿತ್ರಣ ಕೊಟ್ಟರೂ ತನ್ನ ಕ್ರೂರತೆ, ಔಪಯೋಗಿಕತೆ, ನಿಷ್ಕರುಣೆಗಳೊಂದಿಗೆ ಅಲ್ಲೆಲ್ಲ ಮನುಷ್ಯನೂ ಹಾಜರಾಗಿ ಬಿಟ್ಟಿರುತ್ತಾನೆ.

ಕವಿತೆ, 'ಶೂನ್ಯತೆ' – ಬೆತ್ತಲೆ ತನದ ಬಗೆಗಿನ ಅನವಶ್ಯಕ ಮಡಿವಂತಿಕೆ ತೊರೆದು, ಪದಗಳನ್ನು ಸಮರ್ಥವಾಗಿ ಬಳಸಿಕೊಂಡಿದೆ. 'ನಾ ಮೆಚ್ಚಿರುವ ಆದರ್ಶ / ನೆಲಕಚ್ಚಿ ಮಣ್ಣಾಗಿ / ಬಿಚ್ಚಿ ಬೀಡಾಡಿದ... / ಈ ಮುಂತಾದ ಸಾಲುಗಳು, ಕವಿತೆಯ ಹರಿವಿಗೆ ಕೊಂಚ ಭಾರ ಎನಿಸುವುದೂ ಸತ್ಯ. ಅದೆಷ್ಟೇ ಸಲ ಓದಿದರೂ 'ಮುಗ್ಧತೆ' ಕವಿತೆ, ಒಂದೇ ಉಸಿರಿಗೆ ಪೂರ್ತಿ ಓದಿಸಿಕೊಳ್ಳುತ್ತದೆ.

ಇಡೀ ಕವನ ಸಂಕಲನದಲ್ಲಿ ಎಲ್ಲಿಯೂ ಭಾವೋದ್ವೇಗಕ್ಕೆ ತನ್ನನ್ನರ್ಪಿಸಿಕೊಳ್ಳದ ಕವಯಿತ್ರಿ 'ಪ್ರತೀಕ್ಷೆ' ಕವಿತೆಯಲ್ಲಿ ಸಹಜ ಭಾವೋದ್ವೇಗಕ್ಕೆ ಒಳಗಾದಂತಿದೆ. 'ಮರುಕಳಿಸಿ ಮನ್ವಂತರ / ಬಿತ್ತು ರಾವಣ ಕಣ್ಣು... ಗಟ್ಟಿ ಕವಚ ಕಡೆ ಕಡೆದು / ವಿಚ್ಛಿದ್ರ ದಿಗ್ಬಂಧನಾ../ ಹೀಗೆ ಒಂದಾರ್ಥದಲ್ಲಿ ಕುದಿಯುತ್ತ ಕಡೆ ಕಡೆಗೆ, ನಿಷ್ಪಾಪಿ ಅಹಲ್ಯೆಯಂತೆ ತಾನೂ, ಜೀವಾತು ರಾಮನ ನಿರೀಕ್ಷೆಯಲ್ಲಿ ನತಾತ್ಮವಾಗುತ್ತಾರೆ.

ಕಾವ್ಯ ಬರೆಯುವುದು, ಮತ್ತು ಕಾವ್ಯವನ್ನು ಬದುಕುವುದು, ಹಾಗೂ ಬದುಕನ್ನು ಕಾವ್ಯವಾಗಿಸುವುದು ಈ ಮೂರು ಬೇರೆ ಬೇರೆ. ಬದುಕಿದ ಬದುಕನ್ನೇ ಕಾವ್ಯವಾಗಿಸುವುದಾದರೆ, ಅದು ಜೀವಂತ ಕಾವ್ಯವಾಗುತ್ತಿದೆ. 'ಪ್ರತೀಕ್ಷೆ'ಯನ್ನು ಅವಲೋಕಿಸುವಾಗ ಕೆಲವು ಸಂಗತಿಗಳು ಗಾಢವಾಗಿ ನನ್ನ ಗಮನ ಸೆಳೆದಿವೆ. ಕವಯಿತ್ರಿಯ ನಿರುದ್ವೇಗ, ಮತ್ತು ಬದುಕಿನ ವಕ್ರತೆಗಳನ್ನು ಕಾವ್ಯವಾಗಿಸುತ್ತಲೂ, ಅದನ್ನು ಮತ್ತೆ ವಾಸ್ತವವೆಂದಪ್ಪಿ, ಒಪ್ಪಿ ಸ್ವೀಕರಿಸುವ ರೀತಿ, ಮಾನವ ಭಾವಗಳ ಬಗ್ಗೆ ಎಲ್ಲಿಯೂ ಹೇವರಿಕೆ ವ್ಯಕ್ತವಾಗದಿದ್ದುದು ಅಂಥ ಕೆಲವು ಸಂಗತಿಗಳು. ಬದುಕು ಕಾವ್ಯವಾಗುವುದೆಂದರೆ ಹೀಗೂ ಹೌದು.

ಬರೀ ಸುಮ್ಮನೆ ಕಾವ್ಯ ಪ್ರಸವ ಸಂಭವಿಸದು, ಕವಿತ್ವದ ಹಿಂದೆ ನಿಶ್ಚಿತವಾಗಿಯೂ ಹೊಯ್ದಾಟವಿರುತ್ತದೆ. ಇಲ್ಲಿಯೂ ಅಂಥ ಸಹಜ ಹೊಯ್ದಾಟವಿದೆ. 'ಪ್ರತೀಕ್ಷೆ', ಮಾನವನ ಹತಾಶೆಯ, ನೈರ್ಲಿಪ್ತದ, ಅಸಹಾಯ ಅನಿವಾರ್ಯ ವಾಸ್ತವದ ಕೋನಗಳಿಗೆ ಕನ್ನಡಿಯಂತಿದ್ದು – ಕವಯಿತ್ರಿಯ ಮುಂದಿನ ಕವಿತಾ ಸಂಕಲನಗಳಲ್ಲಿ ಬದುಕಿನ ಉಜ್ವಲ, ಉತ್ಸಾಹಿ, ಚೈತನ್ಯಪೂರ್ಣ ಮಗ್ಗುಲುಗಳ ಬಿಂಬ ಖಂಡಿತ ಇರುವುದೆಂಬ ಪ್ರತೀಕ್ಷೆ ನನ್ನದು.

ಓ, ಎಲ್ಲಿದ್ದೀ?
ನನ್ನ ಸುತ್ತ ನಿನ್ನ
ಇಕ್ಕಟ್ಟು ಪ್ರಪಂಚ
ಕಟ್ಟಿ ಹೋಗಿದ್ದೀಯಲ್ಲ
ಬಾ ದೀಪ ಹಚ್ಚು



ಅವನ ಅರ್ಧಜೀವ ಆಕೆ
ಅವನರ್ಧ ಬದುಕು ಆಕೆ
ಆದರೆ ಆ ಅರ್ಧ ಅರ್ಧಕ್ಕಾಗಿ
ಉಳಿದರ್ಧ ಇವನೆಲ್ಲಿ
ಕಳೆದು ಹೋದ?!

• • – ನವೀನ್ ಭಟ್, ಗೋಳ್ಳಿ



ಚೈತ್ರರಶ್ಮಿ ಮಾರ್ಚ್, ಏಪ್ರಿಲ್-2009

# ಇಂದು ನಮ್ಮ ಬದುಕಿನ ಮಹತ್ವದ ದಿನ

– ವಿದ್ಯಾ ರಾಮಚಂದ್ರ ಭಟ್, ಶಿರಸಿ

**'ಈ ದಿನ' ವನ್ನು ಜೀವನದ ಅತಿ ಮಹತ್ವದ ದಿನವೆಂದು ಭಾವಿಸುವುದು ಯಶಸ್ವಿ ವ್ಯಕ್ತಿಯ ಮೊದಲ ಒಳಗುಟ್ಟು. ಏಕೆಂದರೆ ಭವಿಷ್ಯದಲ್ಲಿ ಬೀಜವಿರುವುದೇ ವರ್ತಮಾನ ಗರ್ಭದಲ್ಲಿ, ವರ್ತಮಾನಕ್ಕೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದರ ಮೇಲೆ ಭವಿಷ್ಯ ನಿರ್ಧರಿಸಲ್ಪಡುತ್ತದೆ. ಅಂದ ಮೇಲೆ ಈ ಇಂದು, ಆ ಕ್ಷಣ ಹೇಗೆ ತಳೆಯುತ್ತದೆ ಎಂಬುದು ಬಹಳ ಮುಖ್ಯ.**

ಬಹುಪಾಲು ಜನ ತಮ್ಮ ಬದುಕು ನಿರಂತರವಾಗಿರುವುದೆಂಬಂತೆ ನಿಧಾನವಾಗಿ, ವ್ಯರ್ಥವಾಗಿ ದಿನಗಳನ್ನು ದೂಡುತ್ತಾರೆ. ಕೆಲವರು ನಿನ್ನೆಯ ಗುಂಗಿನಲ್ಲಿ ದಿನಕಳೆದರೆ, ಇನ್ನೂ ಕೆಲವರು ನಾಳೆಯ ಕನಸಿನಲ್ಲಿ ಸಮಯ ಕಳೆಯುತ್ತಾರೆ. ಆದರೆ ಇಂದು ಕಳೆದು ಹೋಗುವ ಗಳಿಗೆ ಬದುಕಿನ ಒಂದು ಭಾಗವೆಂಬುದನ್ನು ನಾವು ಎಷ್ಟರ ಮಟ್ಟಿಗೆ ಅರಿತಿದ್ದೇವೆ ?

ನಮ್ಮ ಜೀವನದಲ್ಲಿ ಅತ್ಯಂತ ಮಹತ್ವದ ದಿನ ಯಾವುದು ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾವು ನಮ್ಮ ನೆನಪಿನ ನಿಕ್ಷೇಪ ಕೆದಕಬೇಕಿಲ್ಲ. ಹಾಗೊಂದು ವೇಳೆ ನಾವು ಈ ಪ್ರಶ್ನೆಗೆ ಭೂತ ಕಾಲದಲ್ಲೇ, ಭವಿಷ್ಯತ್ತಿನಲ್ಲೋ ಉತ್ತರ ಹುಡುಕಿದರೆ ನಮ್ಮ ವೈಯಕ್ತಿಕ ಪ್ರಗತಿ ಎಷ್ಟರ ಮಟ್ಟಿಗೆ ಮಿತಿಯುಳ್ಳದ್ದೆಂದು ಭಾವಿಸಬೇಕಾಗುತ್ತದೆ. ಏಕೆಂದರೆ ಮಹತ್ವದ್ದನ್ನು ಸಾಧಿಸಲು ಹೊರಟ ಯಾವುದೇ ವ್ಯಕ್ತಿಗೆ ವರ್ತಮಾನ ಬಹಳ ಮುಖ್ಯ. ಇಂತಹ ವ್ಯಕ್ತಿಗಳಿಗೆ 'ಇಂದು' ಬಹು ಮಹತ್ವದ ದಿನ.

'ಈ ದಿನ' ವನ್ನು ಜೀವನದ ಅತಿ ಮಹತ್ವದ ದಿನವೆಂದು ಭಾವಿಸುವುದು ಯಶಸ್ವಿ ವ್ಯಕ್ತಿಯ ಮೊದಲ ಒಳಗುಟ್ಟು. ಏಕೆಂದರೆ ಭವಿಷ್ಯದಲ್ಲಿ ಬೀಜವಿರುವುದೇ ವರ್ತಮಾನ ಗರ್ಭದಲ್ಲಿ, ವರ್ತಮಾನಕ್ಕೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದರ ಮೇಲೆ ಭವಿಷ್ಯ ನಿರ್ಧರಿಸಲ್ಪಡುತ್ತದೆ. ಅಂದ ಮೇಲೆ ಈ ಇಂದು, ಆ ಕ್ಷಣ ಹೇಗೆ ತಳೆಯುತ್ತದೆ ಎಂಬುದು ಬಹಳ ಮುಖ್ಯ. ಆದಾಗ್ಯೂ ಮಿತಿಯಿಲ್ಲದ ನಮ್ಮ ಬಳಕೆಗಿದೆ ಎಂದು ನಾವು ಭಾವಿಸುತ್ತೇವೆ. ಸಮಯ ಅಮೂಲ್ಯವಾದುದೆಂದು ಸುಲಭವಾಗಿ ಹೇಳಿ ಬಿಡುತ್ತೇವೆ. ಅಷ್ಟೇ ಸುಲಭವಾಗಿ ಅದರ ಮಹತ್ವವನ್ನೇ ಮರೆತು ಬೇಕಾಬಿಟ್ಟಿಯಾಗಿ ಬಳಸಿಯೂ ಬಿಡುತ್ತೇವೆ. ಆದರೆ ಸಮಯಕ್ಕೆ ಈ ವರ್ಣನೆಯನ್ನು ಮೀರಿದ ಮೌಲ್ಯವಿದೆ. ಈ ಜಗತ್ತಿನ ಯಾವುದೇ ವ್ಯಕ್ತಿ (ಆತ ಎಷ್ಟೇ ದೊಡ್ಡವನಿರಲಿ) ಒಂದೇ ಒಂದು ಕ್ಷಣವೂ ಹೆಚ್ಚು ಲಭಿಸದು. ಅಂತೆಯೇ ನಾವು ನಮ್ಮ ಗುರಿಯನ್ನು ಸಾಧಿಸಲು ತತ್‌ಕ್ಷಣವೇ ಕಾರ್ಯ ತತ್ಪರರಾಗುವುದರಲ್ಲಿ ಜಾಣತನವಿದೆ. ಈಗ ಕಳೆದು ಹೋದವುಗಳು ಜೀವನದಲ್ಲಿ ಮತ್ತೆಂದೂ ಮರಳಿಬಾರದು.

ಈ ದಿನದ ಸಾಧನೆ ಬದುಕಿನ ಒಟ್ಟು ಸಾಧನೆಯ ಒಂದು ಭಾಗವೆಂಬುದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇಂಥ ನೂರಾರು ದಿನಗಳ ಮೊತ್ತವೇ ಮನುಷ್ಯನೊಬ್ಬನ ಜೀವಿತಾವಧಿ. ಹಾಗಾಗಿ ನಮ್ಮ ಬದುಕನ್ನು ಒಂದು ದಿನದ ಮಾನದಂಡದಲ್ಲಿ ವಿಂಗಡಿಸಿಕೊಂಡು ಆ ದಿನದ ವೈಫಲ್ಯಗಳನ್ನು ಆಧರಿಸಿ ನಮ್ಮ ಯೋಗ್ಯತೆಯನ್ನು ಅಳೆದು ಬಿಡಬಹುದು.

**ನಾಳೆ ಎಂಬುದೇ ಇಲ್ಲ, ಈ ದಿನವೇ ಭವಿಷ್ಯದ ದಿನ!**

ಆಕಾಂಕ್ಷೆಯನ್ನು ಹೊಂದುವುದು, ನಾಳೆಯ ಬಗ್ಗೆ ಕನಸು ಕಾಣುವುದು ಸಹಜ. ಆದರೆ, ಇಲ್ಲಿ ನಾವು ಒಂದು ಮಾತನ್ನು ಮರೆಯಲಾಗದು. ನಮ್ಮ